ದೆಹಲಿ ಕರ್ನಾಟಕ ಸಂಘದ

# ಅಭಿಮತ

ಸೆಪ್ಟೆಂಬರ್-2017
ಬೆಲೆ ರೂ. 1



## ಬಯಲು ಚಿತ್ರಾಲಯದಲ್ಲಿ

## ಕನಾಟಕದ ಕಲಾವಿದರು

# ಅಭಿಮತ

ದೆಹಲಿ ಕರ್ನಾಟಕ ಸಂಘದ ಅಭಿಮತ

ಸಂಪುಟ 27 ಸಂಚಿಕೆ 12
ಸೆಪ್ಟೆಂಬರ್ 2017, ಬೆಲೆ ರೂ. 1



**ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ**

**ಅಧ್ಯಕ್ಷ**
ವಸಂತ ಶೆಟ್ಟಿ ಬೆಳ್ಳಾರೆ: 9958697823

**ಉಪಾಧ್ಯಕ್ಷರು**
ಆಶಾಲತಾ ಎಂ.: 9891249149
ಎಸ್.ಸಿ. ಹೇಮಲತ: 9971121636

**ಪ್ರಧಾನ ಕಾರ್ಯದರ್ಶಿ**
ಸಿ.ಎಂ.ನಾಗರಾಜ: 9811325440

**ಕೋಶಾಧಿಕಾರಿ**
ಕೆ.ಎಸ್.ಜಿ. ಶೆಟ್ಟಿ 9810232113

**ಜಂಟಿ ಕಾರ್ಯದರ್ಶಿಗಳು**
ಟಿ.ಪಿ. ಬೆಳ್ಳಿಯಪ್ಪ: 9654555795
ಜಮುನಾ ಸಿ. ಮಠದ: 9717146597

**ಸಮಿತಿ ಸದಸ್ಯರು**
ಡಾ. ಎಂ.ಎಸ್. ಶಶಿಕುಮಾರ್: 9811689337
ರಾಧಾಕೃಷ್ಣ: 9818252183
ಪೂಜಾ ಪಿ. ರಾವ್: 9810882498
ವಿ.ವಿ.ಬಿರಾದಾರ: 9873005409
ಸಖಾರಾಮ ಉಪ್ಪೂರು 8447288475
ಸುಮಿತಾ ಮುರಗೋಡ 9873000333
ಶಶಿಕಾಂತ್ ಪಾಟೀಲ್ 9650182413
ಬಾಬುರಾಜ್ ಪೂಜಾರಿ 9818807696
ತ್ಯಾಗೇಶ್ ಮೂರ್ತಿ 9868393961
ಸಂತೋಷ್ ಜೆ. 9911235783

**ವಿಶೇಷ ಆಹ್ವಾನಿತರು**
ಡಾ. ಶರತ್ ಎಸ್. ಜವಳಿ
ಡಾ. ಪುರುಷೋತ್ತಮ ಬಿಳಿಮಲೆ
ಎನ್.ಎಂ. ಸರೋಜ
ರಾಧಾ ಕೌಜಲಗಿ
ಎಂ. ಶಿವರಾಮ ರೈ
ಪಿ. ರಾಜಣ್ಣ

**ಕಾವಲು ಸಮಿತಿ**
ಪಿ.ಎಸ್. ಶೆಟ್ಟಿ
ನಂದಿನಿ ಮಲ್ಯ
ಈಶ್ವರ ಮಡಿವಾಳ


## ನೇರ ಮಾತು

ಕರ್ನಾಟಕದ ಅಸ್ಮಿತತೆಯನ್ನು ದೇಶದ ರಾಜಧಾನಿ ಮತ್ತು ರಾಜ್ಯದ ಹೊರನಾಡಿನಲ್ಲಿ ಬೆಳೆಸಿದವುಗಳೆಂದರೆ ಕರ್ನಾಟಕದ ಖಾಸಗಿ ಮತ್ತು ರಾಷ್ಟ್ರೀಕೃತ ಬ್ಯಾಂಕ್‌ಗಳು, ಇಡ್ಲಿ, ವಡೆ, ದೋಸೆಗಳ ಉಪಾಹಾರಗೃಹಗಳು ಮತ್ತು ಉಡುಪಿ ಹೋಟೆಲ್‌ಗಳು ಹಾಗೂ ಶೈಕ್ಷಣಿಕ ಸಂಸ್ಥೆಗಳು. ಬ್ಯಾಂಕ್ ಅಧಿಕಾರಿಗಳು ಪ್ರಾಮಾಣಿಕತೆ, ವೃತ್ತಿಪರತೆ ಮತ್ತು ಗ್ರಾಹಕರಿಗೆ ಗುಣಮಟ್ಟದ ಸೇವೆಗಳಿಂದಾಗಿ ವಿಶ್ವಾಸಾರ್ಹತೆಯನ್ನು ಗಳಿಸಿದ್ದಾರೆ. ಸರಳ, ರುಚಿಕರ, ಆರೋಗ್ಯದಾಯಕ ಮತ್ತು ದುಬಾರಿಯಲ್ಲದ ತಿಂಡಿತಿನಿಸುಗಳು ಸಿಗುವ ಕರ್ನಾಟಕ ಮೂಲದ ಉಪಾಹಾರಗೃಹಗಳು ನಿರಂತರವಾಗಿ ಹೊರನಾಡಿನವರನ್ನು ತನ್ನತ್ತ ಸೆಳೆದುಕೊಳ್ಳುತ್ತವೆ. ಉತ್ತಮಮಟ್ಟದ ಶಿಕ್ಷಣ ಕ್ರಮ ಮತ್ತು ಬೌದ್ಧಿಕ ಗುಣಮಟ್ಟಗಳಿಗೆ ಕರ್ನಾಟಕ ಮೂಲದ ಶಿಕ್ಷಣಸಂಸ್ಥೆಗಳು ಹೆಸರು ಮಾಡಿವೆ. ಆದರೆ ಉತ್ತಮ ವ್ಯವಸ್ಥೆ ಮತ್ತು ಆರ್ಥಿಕ ಬಲವಿರುವ ಸರಕಾರಿ ಸಂಸ್ಥೆಗಳು, ಜನಪ್ರತಿನಿಧಿಗಳು ಕರ್ನಾಟಕವನ್ನು ಹೊರರಾಜ್ಯಗಳಲ್ಲಿ ಎತ್ತಿ ಹಿಡಿಯಲು ಮಾಡಿದ ಕೆಲಸಗಳು ಅಷ್ಟೇನು ಪ್ರಯೋಜನಕಾರಿಯಾದಂತೆ ಅನಿಸುತ್ತಿಲ್ಲ.

ರಾಜಧಾನಿ ನವದೆಹಲಿಯಲ್ಲಿರುವ ತಮಿಳುನಾಡು ಭವನವು ಪೋಂಗಲ್, ಕೇರಳ ಭವನವು ಓಣಂ, ಮಹಾರಾಷ್ಟ್ರ ಭವನವು ಗಣೇಶ ಹಬ್ಬ, ಗೋವಾ ಭವನವು ಹೊಸ ವರ್ಷ ಮತ್ತು ಕ್ರಿಸ್‌ಮಸ್‌ಗಳಿಗೆ ತನ್ನತನವನ್ನು ತೋರಿಸಿಕೊಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳುತ್ತವೆ. ಆದರೆ ಕನ್ನಡೇತರರರನ್ನು ತಲಪುವಲ್ಲಿ ನಮ್ಮ ರಾಜ್ಯದ ಭವನಗಳು ಹಿಂದೆ ಬಿದ್ದಿವೆ ಎನ್ನಬೇಕು. ರಾಜ್ಯದಿಂದ ಬರುವ ರಾಜಕಾರಣಿಗಳಿಗೆ ಮತ್ತು ಅಧಿಕಾರಿಗಳಿಗೆ ವಸತಿ ವ್ಯವಸ್ಥೆ ಮತ್ತು ವಿವಿಧ ಕಛೇರಿಗಳ ಸಂಪರ್ಕ ಕೊಂಡಿಯಾಗಿ ಸೀಮಿತವಾಗಿ ಈ ಭವನಗಳು ತಮ್ಮ ಕೆಲಸದ ವ್ಯಾಪ್ತಿಯನ್ನು ಸೀಮಿತಗೊಳಿಸಿವೆ. ರಾಜ್ಯ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ನವದೆಹಲಿಯಲ್ಲಿ ತನ್ನ ಕಛೇರಿಯನ್ನು ಹೊಂದಿ ಕನ್ನಡ ಭಾಷೆ, ಸಂಸ್ಕೃತಿ ಕಲೆಗೆ ಒತ್ತುಕೊಟ್ಟು ಕೆಲಸ ಮಾಡಬೇಕಾಗಿದೆ.

ಅದೇ ರೀತಿ ಒಂದೊಮ್ಮೆ ಕಾಲದಲ್ಲಿ ಉತ್ತಮ ಸಂಪರ್ಕ ಕೇಂದ್ರವಾಗಿದ್ದ ಕರ್ನಾಟಕದ ವಾರ್ತಾ ಕೇಂದ್ರವನ್ನು ಕೂಡಾ ಉತ್ತಮ ಮಟ್ಟಕ್ಕೆ ಏರಿಸಬೇಕಾಗಿದೆ. ಸಿಬ್ಬಂದಿಗಳಿಗೆ ಸರಿಯಾದ ಕಛೇರಿಯ ವ್ಯವಸ್ಥೆ, ಹೊರನಾಡಿನಿಂದ ಬರುವವರಿಗೆ ಮಾಹಿತಿ ಮತ್ತು ರಾಜ್ಯದ ಪ್ರಗತಿಯನ್ನು ದೇಶದ ರಾಜಧಾನಿಯನ್ನು ಪಸರಿಸಿವ ಕೆಲಸವನ್ನು ಮಾಡಬೇಕಾಗಿದೆ. ಕರ್ನಾಟಕವನ್ನು ಹೊರರಾಜ್ಯಗಳಲ್ಲಿ ಕರ್ನಾಟಕ ಸರಕಾರದ ವಾರ್ತಾ ಕೇಂದ್ರಗಳು ರಾಯಭಾರಿಯಾಗಿ ವಿವಿಧ ಕ್ಷೇತ್ರಗಳನ್ನು ಕನ್ನಡೇತರರಿಗೆ ಮುಟ್ಟಿಸುವ ಕೆಲಸ ಮಾಡಬೇಕಾಗಿದೆ. ಅದರಲ್ಲೂ ವಿವಿಧ ದೇಶಗಳ ರಾಯಭಾರಿ ಕಛೇರಿಗಳು, ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಕೇಂದ್ರಗಳು, ಪ್ರಭಾವಶಾಲಿ ವ್ಯಕ್ತಿಗಳು ಇರುವ ರಾಜಧಾನಿ ದೆಹಲಿಯಲ್ಲಿ ಕರ್ನಾಟಕ ವಾರ್ತಾ ಕೇಂದ್ರವಂತೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಕರ್ನಾಟಕವನ್ನು ಪ್ರಚಾರ ಮಾಡಲು ಹಲವು ಅವಕಾಶಗಳನ್ನು ಉಪಯೋಗಿಸಿಕೊಳ್ಳಬೇಕಾಗಿದೆ. ಕರ್ನಾಟಕ ಸರಕಾರವು ಈ ಸೌಲಭ್ಯಗಳನ್ನು ಸರಿಯಾಗಿ ಬಳಸಲು ಕೆಲಸ ಮಾಡ ಬೇಕಾಗಿದೆ.

ವಾರ್ತಾ ಕೇಂದ್ರವು ರಾಜ್ಯದ ಮಂತ್ರಿಗಳ ಭಾಷಣಗಳನ್ನು ಮಾಧ್ಯಮಕ್ಕೆ ಬಿಡುಗಡೆ ಮಾಡುವುದಕ್ಕೆ ಗಣರಾಜ್ಯೋತ್ಸವ ಸ್ತಬ್ಧಚಿತ್ರಕ್ಕೆ ಮತ್ತು ರಾಜ್ಯೋತ್ಸವ ಸಂದರ್ಭದಲ್ಲಿ ಎರಡು ಮೂರು ದಿನಗಳ ರಾಜ್ಯೋತ್ಸವ ಆಚರಣೆಗಳನ್ನು ನಡೆಸುವುದರ ಜತೆಗೆ ಸಂಪೂರ್ಣ ರಾಜ್ಯದ ಜಾನಪದ, ಕಲೆ, ನಾಟಕ, ಸಂಗೀತ, ಚಾರಿತ್ರಿಕ, ಚಲನಚಿತ್ರ, ಶೈಕ್ಷಣಿಕ ಸಿರಿವಂತಿಕೆಯನ್ನು ಪ್ರಚಾರಪಡಿಸುವ ಕೇಂದ್ರವಾಗಬೇಕು. ಅದಕ್ಕಾಗಿ ಒಂದು ಸುಸಜ್ಜಿತ ಕಛೇರಿ, ಸಿಬ್ಬಂದಿ ಮತ್ತು ಸಿಬ್ಬಂದಿಗಳಿಗೆ ಬೇಕಾದ ಪರಿಕರ ಮತ್ತು ಅಧಿಕಾರವನ್ನು ನೀಡಬೇಕು. ದೆಹಲಿಯಲ್ಲಿ ಕರ್ನಾಟಕ ಸಂಘವೂ ಸೇರಿದಂತೆ ಹಲವು ಸಕ್ರಿಯ ಕನ್ನಡಪರ ಸಂಘ ಸಂಸ್ಥೆಗಳಿವೆ ಅಲ್ಲದೇ ವಿವಿಧ ಕ್ಷೇತ್ರಗಳಲ್ಲಿ ಭಿನ್ನ ಭಿನ್ನ ಹುದ್ದೆಗಳಲ್ಲಿ ಕನ್ನಡಿಗರಿದ್ದಾರೆ. ಇವರನ್ನೆಲ್ಲಾ ಒಟ್ಟು ಸೇರಿಸಿ ದೆಹಲಿಯಲ್ಲಿರುವ ಕನ್ನಡಿಗರು ರಾಜ್ಯಕ್ಕೆ ಏನು ಕೊಡುಗೆ ನೀಡಬಹುದು ಎನ್ನುವ ಕುರಿತು ಚಿಂತಿಸಿ ರಾಜ್ಯಕ್ಕೆ ಆಗಬಹುದಾದ ಹಲವು ಪ್ರಯೋಜನಗಳನ್ನು ಇವರಿಂದ ಪಡೆಯಬಹುದು. ಮಾತ್ರವಲ್ಲ ಇವರ ಮೂಲಕ ಕರ್ನಾಟಕವನ್ನು ದೆಹಲಿಯಲ್ಲಿ ಪ್ರತಿನಿಧಿಸುವ ಕೆಲಸ ಕಾರ್ಯವನ್ನು ಹಮ್ಮಿಕೊಳ್ಳಬಹುದು.

ರಾಜ್ಯ ಸರಕಾರವು ಈ ಕುರಿತು ತತ್‌ಕ್ಷಣ ಸ್ಪಂದಿಸಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯನ್ನು ದೆಹಲಿಯಲ್ಲಿ ಆರಂಭಿಸಿ ಸಂಸ್ಕೃತಿ ಇಲಾಖೆ ಮತ್ತು ವಾರ್ತಾ ಕೇಂದ್ರ ರಾಜ್ಯದ ಸಾಂಸ್ಕೃತಿಕ ರಾಯಭಾರಿಯಾಗಿ ಕೆಲಸ ಮಾಡಲು ಸಂಪೂರ್ಣ ಸಹಕಾರ ಮತ್ತು ಅಗತ್ಯತೆಯನ್ನು ಪೂರೈಸಬೇಕಾಗಿದೆ. ಅ

**ವಸಂತ ಶೆಟ್ಟಿ ಬೆಳ್ಳಾರೆ, ಅಧ್ಯಕ್ಷರು**

## ಅಭಿಮತ ರಸಪ್ರಶ್ನೆ



1. ಸಂಘದಲ್ಲಿ ನಡೆದ 'ದೆಹಲಿಯಲ್ಲಿ ಕರ್ನಾಟಕದ ಬಯಲು ಚಿತ್ರಾಲಯ' ಕಾರ್ಯಕ್ರಮದ ಉದ್ಘಾಟಕರು ಯಾರು?
2. ಅಂಬಿಕೇಶ್ ಕ್ರಿಕೆಟ್ ಪಂದ್ಯಾವಳಿ ಯಾವ ಮೈದಾನದಲ್ಲಿ ನಡೆಯಲಿದೆ?
3. ಕರ್ನಾಟಕ ಲಲಿತಕಲಾ ಅಕಾಡೆಮಿಯ ಅಧ್ಯಕ್ಷರ ಹೆಸರೇನು?
4. ಕನ್ನಡ ಸಾಹಿತ್ಯ ಪರಿಷತ್ತಿನ 2017ನೇ ಸಾಲಿನ ನಾಗಡಿಕೆರೆ ಕಿಟ್ಟಪ್ಪಗೌಡ ರುಕ್ಮಿಣಿ ದತ್ತಿ ಪ್ರಶಸ್ತಿಯನ್ನು ಪಡೆದವರು ಯಾರು?
5. ಸಂಘದ ಪಿಕ್‌ನಿಕ್ ಎಲ್ಲಿಗೆ ಆಯೋಜಿಸಲಾಗಿದೆ?

ಅಭಿಮತದ ಓದುಗರು ಈ ಮೇಲಿನ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಅಂಚೆ ಮೂಲಕ ಅಥವಾ ಸಂಘದ ಇಮೇಲ್ : dksangha@gmail.com ಮೂಲಕ ದಿನಾಂಕ 25.09.2017ರ ಒಳಗಾಗಿ ತಲುಪಿಸತಕ್ಕದ್ದು. ಎಲ್ಲಾ ಸರಿಯಾದ ಉತ್ತರ ಕಳುಹಿಸಿದವರ ಹೆಸರನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ರಸಪ್ರಶ್ನೆಯಲ್ಲಿ ಅಭಿಮತ ಸಂಪಾದಕ ಮಂಡಳಿಯವರು, ಅವರ ಮನೆಯವರು, ಸಂಘದ ಕಾರ್ಯಕಾರಿ ಸಮಿತಿಯವರು ಮತ್ತು ಅವರ ಮನೆಯವರು ಭಾಗವಹಿಸುವಂತಿಲ್ಲ.

ಆಗಸ್ಟ್ 2017ರ ಅಭಿಮತ ಪತ್ರಿಕೆಯಲ್ಲಿ ಪ್ರಕಟವಾದ ರಸಪ್ರಶ್ನೆಗಳಿಗೆ **ಸರಿಯಾದ ಉತ್ತರ**
1) ಡಾ. ವೈ. ಅವನೀಂದ್ರನಾಥ್ ರಾವ್ ಮತ್ತು ಡಾ. ಎಚ್. ಎಸ್. ಸತ್ಯನಾರಾಯಣ 2) ಗ್ಲಾಡಿಯೇಟರ್ಸ್, ಕಾಪು ತಂಡ 3) ಬಿ.ಜಿ.ಎಲ್. ಸ್ವಾಮಿ 4) ಬಿ.ಜಿ.ಎಲ್. ಸ್ವಾಮಿ 5) ಎಚ್.ಎಸ್. ಕುಲಕರ್ಣಿ

**ಸರಿಯಾದ ಉತ್ತರ ಕಳುಹಿಸಿದವರು.**
ಶ್ರೀ ಕುಮಾರ್ ಲಬ್ಬಿ, ಶ್ರೀ ರಾಜಶೇಖರ ಡಿ.ಎಸ್. ಶ್ರೀ ಶ್ರೀಧನ್ ಮೂರ್ತಿ, ಶ್ರೀಮತಿ ಮೈಥಿಲಿ ಅತ್ತಾವರ, ಶ್ರೀಮತಿ ಮೇಘನಾ ರಮೇಶ್, ಶಾಲಿನಿ ವಿ. ನಾಯಕ್.



DELHI KARNATAKA *SANGHA* Rao Tularam Marg, Sector-12, R K Puram, New Delhi-110022.
Phone: 011-26109615. 011-26104818 email:dksangha@gmail.com

## ಮುನ್ನೋಟ

ಆತ್ಮೀಯ ಸದಸ್ಯರುಗಳಿಗೆ,

ಸಾಂಸ್ಕೃತಿಕ ಕಾರ್ಯಕ್ರಮಗಳು ನಿರಂತರವಾಗಿ ನಡೆಯುತ್ತಿವೆ. ಬೆಂಗಳೂರಿನ ವಿಷ್ಣು ಸೇನಾ ಸಮಿತಿಯು ಆಗಸ್ಟ್ 27ರಂದು ಸಂಘದ ಸಭಾಂಗಣದಲ್ಲಿ ಆಯೋಜಿಸಿದ 'ಡಾ. ವಿಷ್ಣುವರ್ಧನ ರಾಷ್ಟ್ರೀಯ ಉತ್ಸವ' ಅತ್ಯಂತ ಯಶಸ್ವಿಯಾಗಿ ನಡೆದಿದೆ. ಈ ರಾಷ್ಟ್ರೀಯ ಉತ್ಸವವನ್ನು ಡಾ. ಪುರುಷೋತ್ತಮ ಬಿಳಿಮಲೆಯವರು ಉದ್ಘಾಟಿಸಿದರು.

ಅಧ್ಯಕ್ಷತೆಯನ್ನು ಖ್ಯಾತ ಸಾಹಿತಿ ಡಾ. ವಿಜಯಮ್ಮ, ಮುಖ್ಯ ಅತಿಥಿಗಳಾಗಿ ಶ್ರೀ ಟಿ.ಎ. ನಾರಾಯಣ ಗೌಡ, ಶ್ರೀ ಮನುಬಳಿಗಾರ್, ಶ್ರೀ ಡಾ. ವಿ. ನಾಗೇಂದ್ರ ಪ್ರಸಾದ್ ಉಪಸ್ಥಿತರಿದ್ದರು. ಹಿರಿಯ ನಟ ಶ್ರೀ ಎಸ್. ಶಿವರಾಮ್ ಅವರಿಗೆ 'ಡಾ. ವಿಷ್ಣುವರ್ಧನ ರಾಷ್ಟ್ರೀಯ ಪ್ರಶಸ್ತಿ'ಯನ್ನು ಶ್ರೀ ದಿನೇಶ್ ಗುಂಡೂರಾವ್ ಅವರು ಪ್ರದಾನ ಮಾಡಿದರು. ಖ್ಯಾತ ಕಲಾವಿದ ಡಾ. ವಿಷ್ಣುವರ್ಧನ ಅವರ ಹೆಸರಿನಲ್ಲಿ ಅನೇಕ ಹಿರಿಯ ಕಲಾವಿದರುಗಳಾದ ಶ್ರೀ ಚರಣ್ ರಾಜ್, ಶ್ರೀಮತಿ ಹೇಮಾ ಚೌಧರಿ, ಶ್ರೀ ಬಿ.ಸಿ. ಪಾಟೀಲ್, ಶ್ರೀ ಅರುಣ್ ಸಾಗರ್, ಶ್ರೀ ರವಿಶಂಕರ್ ಇನ್ನೂ ಅನೇಕ ಸಿನಿತಾರೆಯರು ದೆಹಲಿ ಕರ್ನಾಟಕ ಸಂಘದ ವೇದಿಕೆಯಲ್ಲಿ ಉಪಸ್ಥಿತರಿದ್ದುದು ನಮಗೆ ಒಂದು ಹೆಮ್ಮೆಯ ವಿಷಯ.

ಆಗಸ್ಟ್ 9, 10 ಮತ್ತು 17ರಂದು ಅಂಬಿಕೇಶ್ ಸ್ಮಾರಕ ಕ್ರಿಕೆಟ್ ಪಂದ್ಯಾವಳಿಯನ್ನು ಜೆಎನ್‌ಯು.ವಿನ ಹಳೇ ಕ್ಯಾಂಪಸ್ ಮೈದಾನದಲ್ಲಿ ಆಯೋಜಿಸಲಾಗಿದೆ. ಈ ಪಂದ್ಯಾವಳಿಯಲ್ಲಿ ಹತ್ತು ತಂಡಗಳು ಭಾಗವಹಿಸುತ್ತಿವೆ. ಇತ್ತೀಚೆಗೆ ನಿಧನಗೊಂಡ ದೆಹಲಿ ಕರ್ನಾಟಕ ಸಂಘದ ಹಿರಿಯ ರಂಗಕರ್ಮಿ ದಿವಂಗತ ಶ್ರೀ ಎಚ್. ಎಸ್. ಕುಲಕರ್ಣಿ ಅವರ ಹೆಸರಿನಲ್ಲಿ 'ರಂಗನಮನ' ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಈ ರಂಗನಮನ ಕಾರ್ಯಕ್ರಮದಲ್ಲಿ ಹೆಸರಾಂತ ನಾಟಕ ತಂಡಗಳಾದ ಸಾತ್ವಿಕ ತಂಡದಿಂದ 'ಚಂದ್ರಗಿರಿ ತೀರದಲ್ಲಿ' ಮತ್ತು ರಂಗಪಯಣ ತಂಡದಿಂದ 'ಗುಲಾಬಿ ಗ್ಯಾಂಗು' ನಾಟಕಗಳು ನಡೆಯಲಿವೆ. ಅಕ್ಟೋಬರ್ 1ರಂದು ಚಂಡೀಗಡ್‌ಗೆ ಆಯೋಜಿಸಲಿರುವ ಪಿಕ್‌ನಿಕ್‌ಗೆ ಈಗಾಗಲೇ ಅನೇಕ ಸದಸ್ಯರುಗಳು ಹೆಸರುಗಳನ್ನು ನೀಡಿದ್ದು ಎಲ್ಲ ಸದಸ್ಯರು ಪಿಕ್‌ನಿಕ್‌ಗೆ ಬಂದು ಯಶಸ್ವಿಗೊಳಿಸಬೇಕೆಂದು ವಿನಂತಿ. ಸತತವಾಗಿ ಮೂರು ದಿನಗಳ ರಜೆ ಇರುವುದರಿಂದ ಭಾನುವಾರದಂದು ಆಯೋಜಿಸಲಾಗಿದೆ ದಯವಿಟ್ಟು ಬನ್ನಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿ. ಅ

***ಸಿ.ಎಂ. ನಾಗರಾಜ, ಪ್ರಧಾನ ಕಾರ್ಯದರ್ಶಿ***

## ದೆಹಲಿ ಕರ್ನಾಟಕ ಸಂಘದ ಮುಂಬರುವ ಕಾರ್ಯಕ್ರಮಗಳು

**2017 ಸೆಪ್ಟೆಂಬರ್ 17**
**ಭಾನುವಾರ**
**ಸಂಜೆ 4.00 ಗಂಟೆಗೆ**

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಕರ್ನಾಟಕ ವಾರ್ತಾ ಕೇಂದ್ರ ಹಾಗೂ ದೆಹಲಿ ಕರ್ನಾಟಕ ಸಂಘ ಇವರ ಸಂಯುಕ್ತ ಆಶ್ರಯದಲ್ಲಿ ಸಂತೋಷ್ ಆನಂದರಾಮ್ ನಿರ್ದೇಶನದ ಕನ್ನಡ ಚಲನಚಿತ್ರ–**ರಾಜಕುಮಾರ**
ಅಭಿನಯ : ಪುನೀತ್ ರಾಜ್‌ಕುಮಾರ್ ಮತ್ತು ಪ್ರಿಯ ಆನಂದ್

**2017 ಸೆಪ್ಟೆಂಬರ್ 23**
**ಶನಿವಾರ**
**ಸಂಜೆ 4.00 ಗಂಟೆಗೆ**

ಗೌಡ ಸಾರಸ್ವತ ಬ್ರಾಹ್ಮಣ ಸಮಾಜ ಹಾಗೂ ಕೆನರಾ ಕಲ್ಚರಲ್ ಅಸೋಸಿಯೇಶನ್ ಸಹಯೋಗದಲ್ಲಿ ಕೊಂಕಣಿ ನಾಟಕ–
**ಆರ್ದೆ ಅರ್ಧಕುಟೆ**

**2017 ಸೆಪ್ಟೆಂಬರ್ 24**
**ಭಾನುವಾರ**
**ಅಪರಾಹ್ನ 2.00 ಗಂಟೆಗೆ**

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಕರ್ನಾಟಕ ವಾರ್ತಾ ಕೇಂದ್ರ ಹಾಗೂ ದೆಹಲಿ ಕರ್ನಾಟಕ ಸಂಘ ಇವರ ಸಂಯುಕ್ತ ಆಶ್ರಯದಲ್ಲಿ ವಿಜಯಪ್ರಸಾದ್ ನಿರ್ದೇಶನದ ಕನ್ನಡ ಚಲನಚಿತ್ರ–**ನೀರ್ ದೋಸೆ.** ಅಭಿನಯ : ಹರಿಪ್ರಿಯ, ಜಗ್ಗೇಶ್

**2017 ಸೆಪ್ಟೆಂಬರ್ 24**
**ಭಾನುವಾರ**
**ಸಂಜೆ 5.30 ಗಂಟೆಗೆ**

ಖ್ಯಾತ ಕಾದಂಬರಿಗಾರ್ತಿ ಎಂ.ಕೆ. ಇಂದಿರಾ ಮತ್ತು ಕಥೆಗಾರ್ತಿ ವಾಣಿ ಅವರ **ಶತಮಾನೋತ್ಸವ**
ಉಪನ್ಯಾಸ : ಶ್ರೀಮತಿ ಎಂ.ಎಸ್. ಆಶಾದೇವಿ ಮತ್ತು ಶ್ರೀಮತಿ ರೇಣುಕಾ ನಿಡಗುಂದಿ

## ಅಂಬಿಕೇಶ್ ಸ್ಮಾರಕ ಕ್ರಿಕೆಟ್ ಪಂದ್ಯಾವಳಿ

ದೆಹಲಿ ಕರ್ನಾಟಕ ಸಂಘವು ವಾರ್ಷಿಕೋತ್ಸವದ ಅಂಗವಾಗಿ 2017–18ನೇ ಸಾಲಿನ ಅಂಬಿಕೇಶ್ ಸ್ಮಾರಕ ಕ್ರಿಕೆಟ್ ಪಂದ್ಯಾವಳಿಯನ್ನು ಸೆಪ್ಟೆಂಬರ್ 10, 17 ಮತ್ತು 24ರಂದು ಜೆ.ಎನ್. ಯು.ವಿನ ಹಳೆ ಕ್ಯಾಂಪಸ್‌ನಲ್ಲಿರುವ ಎಸ್.ಡಿ.ಜಿ. ಗ್ರೌಂಡ್‌ನಲ್ಲಿ ಆಯೋಜಿಸಲಾಗಿದೆ.

## ಪಿಕ್‌ನಿಕ್

ದೆಹಲಿ ಕರ್ನಾಟಕ ಸಂಘವು ಸಂಘದ ಸದಸ್ಯರುಗಳಿಗೆ ಅಕ್ಟೋಬರ್ 1ರಂದು ಚಂಡೀಗಢಕ್ಕೆ ಪಿಕ್‌ನಿಕ್ ಆಯೋಜಿಸುತ್ತಿದೆ. ಬರಲಿಚ್ಛಿಸುವ ಸದಸ್ಯರಗಳು ತಮ್ಮ ಹೆಸರನ್ನು 15.09.2017ರ ಒಳಗಾಗಿ ಸಂಘದ ಕಛೇರಿಯಲ್ಲಿ ನೋಂದಾಯಿಸಬೇಕಾಗಿ ವಿನಂತಿ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ :
ಶ್ರೀ ಸಿ.ಎಂ. ನಾಗರಾಜ : 9811325440
ಶ್ರೀ ವಿ.ವಿ. ಬಿರಾದಾರ : 9873005409
ಶ್ರೀ ರಾಧಾಕೃಷ್ಣ : 9818252183

## ವೈದ್ಯಕೀಯ ಸಲಹೆಗಳು

**ಡಾ. ನಿರಂಜನ್ ನಾಯ್ಕ್,** MBBS, MS (AIIMS), ONCO-SURGERY (IRCH, AIIMS) ಅವರಿಂದ ಕ್ಯಾನ್ಸರ್ ಸಂಬಂಧಿತ ರೋಗಗಳಿಗೆ ಉಚಿತ ಸಲಹೆ ಭಾನುವಾರ 17 ಸೆಪ್ಟೆಂಬರ್, 2017ರಂದು ಬೆಳಿಗ್ಗೆ 10 ಗಂಟೆಯಿಂದ.

**ಡಾ. ಸಾಯಿಪ್ರಶಾಂತಿ ಶೆಟ್ಟಿ** B.A.M.S., Msc, Yoga Therapy ಅವರಿಂದ ಆಯುರ್ವೇದ ಮತ್ತು ಯೋಗ ಸಂಬಂಧಿತ ರೋಗಗಳಿಗೆ ಉಚಿತ ಸಲಹೆ ಭಾನುವಾರ 17 ಸೆಪ್ಟೆಂಬರ್, 2017ರಂದು ಸಾಯಂಕಾಲ 4 ಗಂಟೆಯಿಂದ.

**ಡಾ. ಗುರುರಾಜ ಸಂಗೊಂದಿಮಠ** MS, FNB, Spine Surgeon, ಅವರಿಂದ ಬೆನ್ನು ಮೂಳೆಗೆ ಸಂಬಂಧಿತ ರೋಗಗಳಿಗೆ ಉಚಿತ ವೈದ್ಯಕೀಯ ಸಲಹೆ ಭಾನುವಾರ 24 ಸೆಪ್ಟೆಂಬರ್, 2017ರಂದು ಬೆಳಿಗ್ಗೆ 11 ಗಂಟೆಯಿಂದ.

**ಡಾ. ಭೀಮ್ ಭಟ್** M.D. (AYU) ಅವರಿಂದ ಉಚಿತ ಆಯುರ್ವೇದ ವೈದ್ಯಕೀಯ ಸಲಹೆ ಭಾನುವಾರ 24 ಸೆಪ್ಟೆಂಬರ್, 2017ರಂದು ಸಾಯಂಕಾಲ 4 ಗಂಟೆಯಿಂದ.

ದೆಹಲಿ ಕರ್ನಾಟಕ ಸಂಘದ ಸುಸಜ್ಜಿತವಾದ ಆರ್ಟ್ ಗ್ಯಾಲರಿ ಕಲಾ ಪ್ರದರ್ಶನಕ್ಕಾಗಿ ಸಿದ್ಧವಿದೆ. ಹೆಚ್ಚಿನ ಮಾಹಿತಿಗಾಗಿ ದೆಹಲಿ ಕರ್ನಾಟಕ ಸಂಘದ ಕಾರ್ಯಾಲಯವನ್ನು ಸಂಪರ್ಕಿಸಿರಿ. ಫೋನ್ : 9560653021/ 9560563203, 011–26109615 / 26104818

ಅಭಿಮತ ಪ್ರಧಾನ ಸಂಪಾದಕರು
ಬಾಲಕೃಷ್ಣ ನಾಯ್ಕ್ ಡಿ.

ಅಭಿಮತ ಸಂಪಾದಕ ಮಂಡಳಿ
ಸಖಾರಾಮ ಉಪ್ಪೂರು, ಚಂದ್ರಶೇಖರ್ ಎನ್.ಪಿ., ಎಸ್. ಕುಮಾರ್

ಸಂಪುಟ 27 ಸಂಚಿಕೆ 12
ಸೆಪ್ಟೆಂಬರ್ 2017

ಅಭಿಮತ

## ಸಂಪಾದಕರ ಟಿಪ್ಪಣಿಗಳು

# ನಮ್ಮೊಳಗಿನ ಹಿಂಸಾ ಸಂಸ್ಕೃತಿಯನ್ನು ತೊಡೆದು ಹಾಕಬೇಕಾಗಿದೆ

ಮಹಾತ್ಮಾ ಗಾಂಧಿಯವರು ಸತ್ಯ ಮತ್ತು ಅಹಿಂಸೆಯ ಮಾರ್ಗದಲ್ಲಿ ಬ್ರಿಟಿಷರ ವಿರುದ್ಧ ಹೋರಾಡಿ ಭಾರತಕ್ಕೆ ಸ್ವಾತಂತ್ರ್ಯವನ್ನು ತಂದು ಕೊಟ್ಟರು. ಆದರೆ ಸ್ವತಂತ್ರ ಭಾರತದ ದುರಂತವೆಂದರೆ ಮಹಾತ್ಮಾ ಗಾಂಧಿಯವರು ಗುಂಡೇಟಿನ ಹಿಂಸೆಗೊಳಗಾಗಿ ಅಸು ನೀಗಬೇಕಾಯಿತು. ಅದೇ ಹಿಂಸೆಯ ಪರಂಪರೆ ಮುಂದುವರಿದು ದೇಶದ ಇಬ್ಬರು ಪ್ರಧಾನಿಗಳು ಭಯೋತ್ಪಾದನೆಯ ಬೆಂಬಲಿಗರ ಗುಂಡಿಗೆ ಕಗ್ಗೊಲೆಯಾದರು. ಪಾರಂಪಾರಿಕವಾಗಿ ನಾವು ಶಾಂತಿ ಬಯಸುವವರು, ಅದುವೇ ನಮ್ಮ ಸಂಸ್ಕೃತಿಯೆಂದು ಹೇಳಿಕೊಂಡರೂ ವಾಸ್ತವಿಕ ನೆಲೆಯಲ್ಲಿ ನಮ್ಮ ಸಂಸ್ಕೃತಿಯಲ್ಲಿ ಹಿಂಸೆ ಮತ್ತು ಪ್ರತೀಕಾರಗಳು ಕೂಡಾ ವೈಭವೀಕರಣಗೊಂಡಿವೆ. ತನ್ನದೇ ಪ್ರಜೆಗಳ ದಾರುಣ್ಯವನ್ನು ಕಂಡು ಅರಮನೆ ಬಿಟ್ಟು ಹೋದ ಸಿದ್ಧಾರ್ಥ ಮುಂದೆ ಸತ್ಯ ಮತ್ತು ಅಹಿಂಸೆಯನ್ನು ಪ್ರತಿಪಾದಿಸುತ್ತಾ ಗೌತಮಬುದ್ಧನಾಗಿ ಬೌದ್ಧ ಧರ್ಮವನ್ನು ಸ್ಥಾಪಿಸಿದರೂ ಭಾರತಕ್ಕಿಂತ ಇತರ ದೇಶಗಳಲ್ಲಿ ಆ ಧರ್ಮವು ಹೆಚ್ಚು ಜನಪ್ರಿಯವಾಯಿತು. ಅಂದಿನ ಹಿಂದೂ ಧರ್ಮ ಮತ್ತು ಬೌದ್ಧಧರ್ಮಗಳ ನಡುವೆ ವೈಚಾರಿಕ ನೆಲೆಯಲ್ಲಿ ಚರ್ಚೆ ನಡೆದಂತೆ, ಆಕ್ರಮಣಗಳೂ ನಡೆದಿವೆ ಎಂಬುದರ ಪುರಾವೆಗಳನ್ನು ಕೆಲವು ಇತಿಹಾಸ ತಜ್ಞರು ಕೊಡುತ್ತಾರೆ. ಮುಂದೆ ಎಂಟನೇ ಶತಮಾನದಿಂದ ಆರಂಭಗೊಂಡ ಇಸ್ಲಾಮೀ ಆಕ್ರಮಣಗಳು ಬಹುವಾಗಿ ಬಲಪ್ರಯೋಗ ಮತ್ತು ಹಿಂಸೆಯಿಂದಲೇ ನಡೆದಿರುವುದನ್ನು ಇತಿಹಾಸವು ದಾಖಲಿಸಿದೆ.

ಮಧ್ಯಕಾಲೀನ ಇತಿಹಾಸದ ನಂತರ ವಸಾಹತುಶಾಹೀ ಕಾಲದಲ್ಲೂ ಹಿಂಸೆಯ ದಬ್ಬಾಳಿಕೆಯೇ ಮೆರೆಯಿತು. ಹದಿನಾರನೇ ಶತಮಾನದಲ್ಲಿಯೇ ಪಶ್ಚಿಮದ ಕರಾವಳಿಯಲ್ಲಿ ನೆಲೆವೂರಿದ ಯುರೋಪಿಯನ್ನರು ತಮ್ಮ ವಿಚಾರಗಳನ್ನು ಭಾರತೀಯರ ಮೇಲೆ ಹೇರಲು ಬಲಪ್ರಯೋಗಿಸಿದ ಘಟನೆಗಳ ವಿವರಗಳು ನಮಗೆ ಗೋವಾ ಮತ್ತು ಕೇರಳದ ಇತಿಹಾಸದ ಪುಟಗಳಲ್ಲಿ ಸಿಗುತ್ತವೆ. ನಾವು ಶಾಂತಿಮಂತ್ರ ಜಪಿಸುವವರು ಎನ್ನುತ್ತಲೇ ನಮ್ಮಲ್ಲಿ ಹಿಂಸೆ ಮತ್ತು ಆಕ್ರಮಣಗಳ ದೊಡ್ಡ ಪರಂಪರೆಯೇ ಇದೆ. ಸ್ವಾತಂತ್ರ್ಯೋತ್ತರ ಇತಿಹಾಸದಲ್ಲಿ, 1947ರಲ್ಲಿ ಭಾರತ ವಿಭಜನೆಯ ಸಂದರ್ಭದಲ್ಲಿ ನಡೆದ ಹಿಂದೂ ಮುಸ್ಲಿಂ ಗಲಭೆಯ ಹಿನ್ನಲೆಯ ಮುಂದುವರಿಕೆಯೋ ಎಂಬಂತೆ ಇಂದಿನವರೆಗೂ ಹಲವಾರು ಹಿಂಸಾಚಾರಗಳು ನಡೆಯುತ್ತಿವೆ. 1969ರಲ್ಲಿ ಗುಜರಾತ್‌ನಲ್ಲಿ ನಡೆದ ಗಲಭೆ, 1984ರ ಸಿಖ್ ವಿರೋಧಿ ಗಲಭೆ, ಕಾಶ್ಮೀರದಲ್ಲಿ ಮತ್ತು ಈಶಾನ್ಯ ಭಾರತದಲ್ಲಿ ನಡೆದ ಗಲಭೆಗಳು, ನಂತರ ಮುಸ್ಲಿಂ ವಿರೋಧಿ, ಕ್ರಿಶ್ಚಿಯನ್ ವಿರೋಧಿ ಮತ್ತು ಹಿಂದೂ ವಿರೋಧಿ ಗಲಭೆಗಳು ನಿರಂತರವಾಗಿ ನಮ್ಮ ಸಮಾಜವು ಬರೀ ಶಾಂತಿಯನ್ನು ಪ್ರತಿಪಾದಿಸುವ ಸಮಾಜವಲ್ಲ ಎಂಬುದನ್ನು ರುಜುವಾತುಗೊಳಿಸುತವೆ. ರಾಜಕೀಯ ಲಾಭಕ್ಕಾಗಿ ಕೋಮುದಲ್ಲುರಿಯನ್ನು ಹಚ್ಚಿ ಜನಸಾಮಾನ್ಯರ ಹತ್ಯೆಗಳು ಒಂದೆಡೆ ನಡೆದರೆ, ಪಕ್ಷ ರಾಜಕಾರಣವು ಕಾರ್ಯಕರ್ತರ ಹತ್ಯೆಗಳನ್ನು ನಡೆಸಿ ಹಿಂಸೆಯನ್ನು ಪ್ರಚೋದಿಸುತ್ತವೆ. ಇದರ ಜತೆಗೆ ವ್ಯವಸ್ಥೆಯ ವಿರುದ್ಧ ಎತ್ತುವ ದನಿಗಳನ್ನು ಅಡಗಿಸಲು ವಿಚಾರವಂತರ ಹತ್ಯೆಗಳನ್ನು ನಡೆಸುವ ಪರಂಪರೆಯೂ ಹುಟ್ಟಿಕೊಂಡಿದೆ.

ಕನ್ನಡದ ಹೆಸರಾಂತ ಸಂಶೋಧಕ ಡಾ. ಎಂ.ಎಂ. ಕಲಬುರ್ಗಿಯವರ ಹತ್ಯೆಯಾಗಿ ಆಗಸ್ಟ್ 30ರಂದು ಎರಡು ವರ್ಷವಾದರೂ ಹಂತಕರನ್ನು ಪತ್ತೆ ಹಚ್ಚಿ ಶಿಕ್ಷಿಸುವತ್ತ ಯಾವುದೇ ಭರವಸೆಗಳು ಕಾಣುತ್ತಿಲ್ಲ. ಇದೇ ರೀತಿ ಸಪ್ಟಂಬರ್ 5ರಂದು ಕನ್ನಡದ ಖ್ಯಾತ ಪತ್ರಕರ್ತೆ ಗೌರಿ ಲಂಕೇಶ್ ಅವರನ್ನು ಅವರ ಮನೆಯೆದುರೇ ಗುಂಡಿಟ್ಟು ಕೊಲ್ಲಲಾಗಿದೆ. ಕೋಮು ಸೌಹಾರ್ದ ವೇದಿಕೆಯ ಮೂಲಕ ಬಲಪಂಥೀಯ ವಿಚಾರಗಳನ್ನು ಖಂಡಿಸುತ್ತಿದ್ದ ಅವರ ಕಗ್ಗೊಲೆ ನಮ್ಮ ಹಿಂಸಾಸಂಸ್ಕೃತಿಯ ಪ್ರತಿಬಿಂಬದಂತೆ ಕಾಣುತ್ತದೆ. ಭಾರತದ ಸಂವಿಧಾನವು ಭಾರತವು ಒಂದು ವೈವಿಧ್ಯ ಸಂಸ್ಕೃತಿ ಮತ್ತು ವಿಚಾರಗಳ ದೇಶ ಎಂಬುದನ್ನು ಪರಿಗಣಿಸಿ ಎಲ್ಲಾ ವ್ಯಕ್ತಿಗಳಿಗೂ ಅವರವರ ವೈಯಕ್ತಿಕ ವಿಚಾರಗಳನ್ನು ಇನ್ನೊಬ್ಬರಿಗೆ ಹಾನಿಯಾಗದಂತೆ ಪ್ರಕಟಿಸುವ ಹಕ್ಕನ್ನು ನೀಡಿದೆ. ಸಂವಿಧಾನವನ್ನು ಅಕ್ಷರಶಃ ಪಾಲಿಸುವುದೇ ನಾವು ನಮ್ಮ ದೇಶಕ್ಕೆ ನೀಡುವ ಅತ್ಯಂತ ದೊಡ್ಡ ಗೌರವವಾಗಿದೆ. ನಮ್ಮೊಳಗೆ ವೈಯಕ್ತಿಕವಾಗಿ ಮತ್ತು ಸಾಮಾಜಿಕವಾಗಿ ಉಳಿದುಕೊಂಡಿರುವ ಹಿಂಸಾಸಂಸ್ಕೃತಿಯನ್ನು ತೊಡೆದು ಹಾಕಲು ಇನ್ನೋರ್ವ ಗೌತಮ ಬುದ್ಧ ಅಥವಾ ಮಹಾತ್ಮಾ ಗಾಂಧಿಗಾಗಿ ಕಾಯುವ ಬದಲು ನಾವು ಕರೆದುಕೊಳ್ಳುವ ಶಾಂತಿಪ್ರಿಯ ವ್ಯಕ್ತಿಯಾಗಿ ನಮ್ಮನ್ನು ನಾವೇ ರೂಪಿಸಿಕೊಳ್ಳಬೇಕು. ಅ

ಬಾಲಕೃಷ್ಣ ನಾಯ್ಕ್ ಡಿ.

# ದೆಹಲಿ ಕರ್ನಾಟಕ ಸಂಘದಲ್ಲಿ ಸ್ವಾತಂತ್ರ್ಯ ದಿನಾಚರಣೆ



ಭಾರತದ 71ನೇ ವರ್ಷದ ಸ್ವಾತಂತ್ರ್ಯ ದಿನಾಚರಣೆಯ ಸಂದರ್ಭದಲ್ಲಿ ದೆಹಲಿ ಕರ್ನಾಟಕ ಸಂಘದಲ್ಲಿ ದೆಹಲಿಯ ಹಿರಿಯ ಕಲಾವಿದ ಶ್ರೀ ಭೀಮರಾವ್ ಮುರಗೋಡ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಧ್ವಜಾರೋಹಣ ಮಾಡಿದರು.

ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ, ಖಜಾಂಚಿ ಶ್ರೀ ಕೆ.ಎಸ್.ಜಿ. ಶೆಟ್ಟಿ, ಸದಸ್ಯರಾದ ಡಾ. ಎಂ.ಎಸ್. ಶಶಿಕುಮಾರ್, ಶ್ರೀ ವಿ.ವಿ. ಬಿರಾದಾರ, ಶ್ರೀಮತಿ ಪೂಜಾ ರಾವ್, ಶ್ರೀಮತಿ ಸುಮಿತಾ ಮುರಗೋಡ ಮತ್ತು ಶ್ರೀಮತಿ ಶಾಲನ್ ಮುರಗೋಡ, ಶ್ರೀ ಶಿವಾನಂದ ಇಂಗಳೇಶ್ವರ ಮೊದಲಾದವರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಧ್ವಜಾರೋಹಣ ಹಾಗೂ ದೇಶಭಕ್ತಿ ಗೀತೆಗಳ ಜೊತೆಗೆ ರಾಷ್ಟ್ರಗೀತೆಯನ್ನು ಹಾಡಿ ಗೌರವ ಸಲ್ಲಿಸಲಾಯಿತು ಅ

***ಅಭಿಮತ ವರದಿ***

# ಸಂಘದಲ್ಲಿ ಹೇಮರೆಡ್ಡಿ ಅವರ ಚಿತ್ರಕಲಾ ಪ್ರದರ್ಶನ

ರಾಯಚೂರಿನ ವಿಕಲಚೇತನ ಚಿತ್ರಕಲಾವಿದರಾದ ಹೇಮರೆಡ್ಡಿಯವರಿಂದ ಇದೇ ಆಗಸ್ಟ್ 10 ರಿಂದ 13ರವರೆಗೆ ದೆಹಲಿ ಕರ್ನಾಟಕ ಸಂಘದ ಆರ್ಟ್ ಗ್ಯಾಲರಿಯಲ್ಲಿ ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನವನ್ನು ಆಯೋಜಿಸಲಾಗಿತ್ತು.

ದೆಹಲಿ ಕರ್ನಾಟಕ ಸಂಘದ ಆರ್ಟ್ ಗ್ಯಾಲರಿಯನ್ನು ಹೇಮರೆಡ್ಡಿ ಅವರ ಚಿತ್ರ ಪ್ರದರ್ಶನಕ್ಕೆ ಉಚಿತವಾಗಿ ನೀಡಿ ಅವರಿಗೆ ರಾಷ್ಟ್ರಮಟ್ಟದಲ್ಲಿ ಚಿತ್ರಕಲಾ ಪ್ರದರ್ಶನವನ್ನು ಏರ್ಪಡಿಸಲು ಅವಕಾಶ ಮಾಡಲಾಗಿದೆ. ಇನ್ನು ಅಂತರರಾಷ್ಟ್ರಮಟ್ಟದಲ್ಲಿ ಅವರ ಕಲಾಪ್ರದರ್ಶನ ಆಗಬೇಕು ಎಂದು ಸಂಘದ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆಯವರು ಚಿತ್ರಕಲಾ ಪ್ರದರ್ಶನವನ್ನು ಉದ್ಘಾಟಿಸಿ ಹಾರೈಸಿದರು.

ಈ ಸಂದರ್ಭದಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಮತ್ತು ಕಾರ್ಯಕಾರಿ ಸಮಿತಿಯ ಪದಾಧಿಕಾರಿಗಳು ಮತ್ತು ಸದಸ್ಯರು ಹಾಗೂ ರಾಯಚೂರಿನ ಕಲಾಸಂಕುಲ ಸಂಸ್ಥೆಯ ಮಾರುತಿ ಬಡಿಗೇರ್ ಮತ್ತು ದೊಡ್ಡೇಂದ್ರ ಮಹಾಸ್ವಾಮಿಗಳು ಉಪಸ್ಥಿತರಿದ್ದರು. ಅ


***ಅಭಿಮತ ವರದಿ***



# ದೆಹಲಿಯಲ್ಲಿ ಕರ್ನಾಟಕದ ಬಯಲು ಚಿತ್ರಾಲಯ







## ‘ದೆಹಲಿಯ ಕಲುಷಿತ ವಾತಾವರಣದ ದುರ್ಗಂಧ ಕಲಾಕೃತಿಗಳಿಂದ ಸುಗಂಧವಾಗಲಿ’- ಡಾ. ಎಚ್.ಎಸ್. ಶಿವಪ್ರಕಾಶ್

“ಮಾಲಿನ್ಯದಿಂದ ದುರ್ಗಂಧಮಯವಾಗಿರುವ ದೆಹಲಿಯ ವಾತಾವರಣವನ್ನು ಚಿತ್ರಕಲಾವಿದರು ರಚಿಸಲಿರುವ ಕಲಾಕೃತಿಗಳು ಸುಗಂಧಮಯವಾಗಿಸಲಿ” ಎಂದು ನವದೆಹಲಿಯ ಜವಾಹರಲಾಲ್ ನೆಹರು ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾದ ಡಾ. ಎಚ್.ಎಸ್. ಶಿವಪ್ರಕಾಶ್ ಅವರು ಹೇಳಿದರು. ಅವರು ದೆಹಲಿ ಕರ್ನಾಟಕ ಸಂಘದ ಆವರಣದಲ್ಲಿ ಆಗಸ್ಟ್ 2 ರಿಂದ 6ರ ವರೆಗೆ ನಡೆಸಲಾದ “ದೆಹಲಿಯಲ್ಲಿ ಕರ್ನಾಟಕದ ಬಯಲು ಚಿತ್ರಾಲಯ” ಕಾರ್ಯಗಾರವನ್ನು ಉದ್ಘಾಟಿಸಿ ಮಾತಾಡುತ್ತಿದ್ದರು. ಕನ್ನಡ ಅಧ್ಯಯನ ಪೀಠದ ಪ್ರಾಧ್ಯಾಪಕರಾದ ಡಾ. ಪುರುಷೋತ್ತಮ ಬಿಳಿಮಲೆ ಅವರು ಬಯಲು ಚಿತ್ರಾಲಯವು ಯಶಸ್ವಿಯಾಗಿ ನಡೆದು ಕರ್ನಾಟಕದ ಕಲೆ ಮತ್ತು ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಅತ್ಯುತ್ತಮ ಕಲಾಕೃತಿಗಳು ಮೂಡಿಬರಲಿ ಎಂದು ಆಶಿಸಿದರು.

ದೆಹಲಿ ಕರ್ನಾಟಕ ಸಂಘ ಮತ್ತು ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು ಜಂಟಿಯಾಗಿ ನಡೆಸಿದ ಈ ಚಿತ್ರಕಲಾ ಕಾರ್ಯಾಗಾರದಲ್ಲಿ ಕರ್ನಾಟಕದ 15 ಪ್ರಸಿದ್ಧ ಚಿತ್ರಕಲಾವಿದರು ಭಾಗವಹಿಸಿದರು.

ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಮಾತಾಡುತ್ತಾ ದೆಹಲಿಯ ಕನ್ನಡ ಮತ್ತು ಕನ್ನಡೇತರರು, ಕಲಾಸಕ್ತರು, ಸಂಸದರು ಮತ್ತು ಸರಕಾರದ ಉನ್ನತ ಅಧಿಕಾರಿಗಳಿಗೆ ಕರ್ನಾಟಕದ ಕಲಾವಿದರನ್ನು ಹಾಗೂ ಕಲೆಯನ್ನು ಪರಿಚಯಿಸುವುದು ಈ ಕಾರ್ಯಾಗಾರದ ಉದ್ದೇಶವಾಗಿದೆ ಎಂದರು.

ಕರ್ನಾಟಕ ಲಲಿತಕಲಾ ಅಕಾಡೆಮಿಯ ಅಧ್ಯಕ್ಷರಾದ ಡಾ. ಎಂ.ಎಸ್. ಮೂರ್ತಿಯವರು ಮಾತಾಡುತ್ತಾ ಸಂಘವು ದೆಹಲಿಯಲ್ಲಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸುತ್ತಾ ಕರ್ನಾಟಕದ ಕಲಾವಿದರನ್ನು ಜಗತ್ತಿಗೆ ಪರಿಚಯಿಸುವ ಕೆಲಸವನ್ನು ಮಾಡುತ್ತಿದೆ. ನಾವು ಪರಿಶ್ರಮಿಸಿ ಈ ಐದು ದಿನಗಳಲ್ಲಿ ಅತ್ಯುತ್ತಮ ಕಲಾಕೃತಿ ಸೃಷ್ಟಿಸುವ ಸರ್ವ ಪ್ರಯತ್ನ ಮಾಡೋಣ ಎಂದು ಹೇಳಿದರು. ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಅವರು 15 ಜನ ಕಲಾವಿದರನ್ನು ಪರಿಚಯಿಸಿ ಸ್ವಾಗತಿಸುತ್ತ ಸಂಘದ ವತಿಯಿಂದ ಎಲ್ಲ ಕಲಾವಿದರಿಗೆ ಮತ್ತು ಮುಖ್ಯ ಅತಿಥಿಗಳಿಗೆ ಪುಷ್ಪಗುಚ್ಛ ನೀಡಿ ಅಭಿನಂದಿಸಿದರು. ಕಾರ್ಯಕಾರಿ ಸಮಿತಿಯ ಪದಾಧಿಕಾರಿಗಳು, ಸದಸ್ಯರು, ಹಿರಿಯ ಕಲಾವಿದ ಶ್ರೀ ಭೀಮರಾವ್ ಮುರಗೋಡ ದಂಪತಿಗಳೂ ಸೇರಿದಂತೆ ಹಲವಾರು ಮಂದಿ ಸ್ಥಳೀಯ














ಕಲಾವಿದರು ಮತ್ತು ಕಲಾರಸಿಕರು ಉಪಸ್ಥಿತರಿದ್ದರು. ಸಂಘದ ಸಾಂಸ್ಕೃತಿಕ ಸಮಿತಿಯ ಅಧ್ಯಕ್ಷ ಶ್ರೀ ಸಖಾರಾಮ ಉಪ್ಪೂರು ಎಲ್ಲರನ್ನು ವಂದಿಸಿದರು.

ದೆಹಲಿ ಕರ್ನಾಟಕ ಸಂಘದ ಜಂಟಿ ಕಾರ್ಯದರ್ಶಿ ಶ್ರೀಮತಿ ಜಮುನಾ ಸಿ. ಮಠದ ಹಾಗೂ ಕಾರ್ಯಕಾರಿ ಸಮಿತಿ ಸದಸ್ಯೆ ಶ್ರೀ ಸುಮಿತಾ ಮುರಗೋಡ ಕಾರ್ಯಕ್ರಮದ ಸಂಚಾಲಕರಾಗಿದ್ದು, ಹಿರಿಯ ಚಿತ್ರಕಲಾವಿದರಾದ ಶ್ರೀ ಚೆನ್ನು ಎಸ್. ಮಠದ ಮತ್ತು ಕಲಾವಿದ ಶ್ರೀ ಸುಧೀರ್ ಫಡ್ನೀಸ್ ಅವರು ಕಾರ್ಯಕ್ರಮದ ಸಂಯೋಜಕರಾಗಿದ್ದಾರೆ.

ವೀರೇಶ್ ಎಂ. ರುದ್ರಸ್ವಾಮಿ, ಸಿದ್ದಣ್ಣ ಎಸ್. ಮರಗೋಳ, ಡಾ. ಅಶೋಕ ಎಸ್. ಶೆಟ್ಕಾರ್, ಜಿ.ಎಸ್. ಪಾಟೀಲ, ಮಂಜುನಾಥ ಎನ್. ವಾಲಿ, ನಿಹಾಲ್ ವಿಕ್ರಂ ರಾಜು, ಜಿ.ಎಲ್. ಬಾಬುರಾಜೇಂದ್ರ ಪ್ರಸಾದ್, ರಚಪ್ಪಾಜಿ, ಉದಯ್ ಡಿ. ಜೈನ್, ರಾಣಿ ರೇಖಾ, ವಿ. ಅಂಜಲಿ, ಡಾ. ಸುಶೀಲ ಹೂಗಾರ, ಅನುರಾಧ ಎಸ್., ಕಾವೇರಿ ಎಚ್. ಪೂಜಾರ, ಪೂರ್ಣಿಮಾ ಎನ್. ಇವರುಗಳೇ ಈ ಕಾರ್ಯಾಗಾರದಲ್ಲಿ ಭಾಗವಹಿಸುತ್ತಿರುವ ಕಲಾವಿದರು.

ಇದೇ ಸಂದರ್ಭದಲ್ಲಿ ಆಗಸ್ಟ್ 5ರಂದು ನಡೆದ ಮಾಧ್ಯಮ ಮಿತ್ರರು ಮತ್ತು ಕಾರ್ಯಗಾರದಲ್ಲಿ ಭಾಗವಹಿಸಿದ ಕಲಾವಿದರೊಡನೆ 'ಮುಖಾಮುಖಿ' ಕಾರ್ಯಕ್ರಮದಲ್ಲಿ ಕರ್ನಾಟಕದ ಎಲ್ಲಾ ಮುಖ್ಯ ಟಿ.ವಿ. ಮಾಧ್ಯಮಗಳಾದ ದಿಗ್ವಿಜಯ ನ್ಯೂಸ್, ಟೋಟಲ್ ಟಿ.ವಿ. ಟಿ.ವಿ9, ಸುದ್ದಿ ಟಿ.ವಿ., ಸುವರ್ಣ ಟಿ.ವಿ. ಝೀ ಟಿ.ವಿ, ಇನ್ನೂ ಮುಂತಾದ ದೆಹಲಿಯ ಟಿ.ವಿ. ಮತ್ತು ಪತ್ರಿಕಾ ಮಾಧ್ಯಮದ ಪ್ರತಿನಿಧಿಗಳು ಪ್ರತಿಯೊಬ್ಬ ಕಲಾವಿದರೊಡನೆ ವಿಶೇಷವಾಗಿ ಸಂದರ್ಶನ ನಡೆಸಿ ಈ ಕಲಾಗಾರದ ಮಹತ್ವ ಮತ್ತು ಉಪಯೋಗವನ್ನು ಪಸರಿಸಿದರು. ಅ

***ಚೆನ್ನು ಎಸ್. ಮಠದ***




# ಕಲಾವಿದರು ಪಾಶ್ಚಿಮಾತ್ಯಕ್ಕಿಂತ ಹೆಚ್ಚು ಪೂರ್ವದತ್ತ ನೋಡಬೇಕು-

ದೆಹಲಿ ಕರ್ನಾಟಕ ಸಂಘ ಮತ್ತು ಕರ್ನಾಟಕ ಲಲಿತ ಕಲಾ ಅಕಾಡೆಮಿ ಜಂಟಿಯಾಗಿ ಆಯೋಜಿಸಿದ್ದ "ದೆಹಲಿಯಲ್ಲಿ ಕರ್ನಾಟಕದ ಬಯಲು ಚಿತ್ರಾಲಯ" ಕಾರ್ಯಾಗಾರದ ಸಮಾರೋಪ ಸಮಾರಂಭವು ಇದೇ ಆಗಸ್ಟ್ 6ರಂದು ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ನೆರವೇರಿತು. ಕರ್ನಾಟಕದಿಂದ ದೆಹಲಿಗೆ ಬಂದು ಈ ಕಾರ್ಯಾಗಾರದಲ್ಲಿ ಭಾಗವಹಿಸಿದ ಹದಿನೈದು ಜನ ಕಲಾವಿದರಿಗೆ ಇದೊಂದು ಅವಿಸ್ಮರಿಣೀಯ ಸಂಜೆಯಾಗಿತ್ತು.

ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಯವರು "ದೆಹಲಿಯಲ್ಲಿ ಕರ್ನಾಟಕದ ಬಯಲು ಚಿತ್ರಾಲಯ" ಆಯೋಜನೆಯ ಹಿಂದಿನ ಪರಿಶ್ರಮ ಹಾಗೂ ಉದ್ದೇಶದ ವಿವರಣೆ ನೀಡಿ, ನೆರೆದಿದ್ದ ಎಲ್ಲಾ ಸಭಾಸದರನ್ನು ಸಮಾರೋಪ ಸಮಾರಂಭಕ್ಕೆ ಸ್ವಾಗತಿಸಿದರು.

ಈ ಸಮಾರಂಭದಲ್ಲಿ ಸಮಾರೋಪ ಭಾಷಣ ನೀಡಿದ ಜಾನಪದ ತಜ್ಞ ಹಾಗು ಜವಾಹರಲಾಲ್ ನೆಹರು ವಿಶ್ವ ವಿದ್ಯಾಲಯದ ಕನ್ನಡ ಅಧ್ಯಯನ ಪೀಠದ ಮುಖ್ಯಸ್ಥರಾದ ಡಾ. ಪುರುಷೋತ್ತಮ ಬಿಳಿಮಲೆಯವರು "ಇಂದಿನ ಹೆಚ್ಚಿನ ಕಲಾವಿದರು ತಮ್ಮ ಕಲಾತಪಸ್ಸಿಗಾಗಿ ಪಶ್ಚಿಮದ ದೇಶಗಳತ್ತ ಕಣ್ಣು ಹರಿಬಿಡುತ್ತಾರೆ. ಪಾಶ್ಚಿಮಾತ್ಯ ಕಲೆಯ ಅನುಸರಣೆಯಿಂದ ಹಣ ಸಂಪಾದಿಸಬಹುದು ಎಂಬ ನಂಬಿಕೆಯಿಂದ ಹೀಗೆ ಮಾಡುತ್ತಾರೆ. ಇನ್ನು ಮುಂದೆ ಹೀಗೆ ಪಶ್ಚಿಮದ ಕಡೆಗೆ ಕಣ್ಣು ಹರಿಸುವುದನ್ನು ಕಡಿಮೆ ಮಾಡಿ ಪೂರ್ವದ ದೇಶಗಳಾದ ಜಪಾನ್, ಚೀನಾ, ಮಲೇಶಿಯಾ, ಕೊರಿಯಾ ಹಾಗೂ ಇನ್ನುಳಿದ ದೇಶಗಳತ್ತ ನೋಡ ಬೇಕು. ಪೂರ್ವದ ದೇಶಗಳ ಜಾನಪದ ಕಲಾಕೃತಿಗಳನ್ನು ಅಭ್ಯಸಿಸಿ ಹೊಸ ಕೃತಿಗಳನ್ನು ರಚಿಸುವ ಅವಶ್ಯಕತೆ ಇದೆ. ಕ್ರಮೇಣ ಈ ಕಲಾಕೃತಿಗಳು ಜನಮೆಚ್ಚುಗೆ ಪಡೆದು ಹಣ ತರುವಲ್ಲಿ ಸಹಾಯಕವಾಗಬಹುದು" ಎಂದು ಕಲಾವಿದರಿಗೆ ಒಳ್ಳೆಯ ಸಲಹೆ ನೀಡಿದರು.

ಸಮಾರೋಪ ಸಮಾರಂಭದ ಅಧ್ಯಕ್ಷರಾಗಿ ಆಗಮಿಸಿದ್ದ, ನವದೆಹಲಿಯ ಲಲಿತಕಲಾ ಅಕಾಡೆಮಿಯ ಶ್ರೀ ಸಿ.ಎಸ್. ಕೃಷ್ಣ ಸೆಟ್ಟಿಯವರು ಮಾತನಾಡಿ, ಇಂತಹ ಇನ್ನಷ್ಟು ಕಲಾಕಾರ್ಯಾಗಾರಗಳನ್ನು ದೆಹಲಿ ಕರ್ನಾಟಕ ಸಂಘ ಮುಂದೆಯೂ ಆಯೋಜಿಸಲಿ ನಮ್ಮಿಂದಾದ ಸಹಕಾರ ಖಂಡಿತಃ ನೀಡುವೆವು ಎಂದು ಹೇಳಿದರು. ಗ್ರಾಮವೊಂದನ್ನು ಆಯ್ದುಕೊಂಡು ಸಂಪೂರ್ಣ ಗ್ರಾಮವನ್ನೇ ಕಾರ್ಯಾಗಾರಕ್ಕೆ ಉಪಯೋಗಿಸಿದ ಹಾಗೂ ಗ್ರಾಮದ ಎಲ್ಲ ಜನರಲ್ಲಿ ಕಲಾ ಆಸಕ್ತಿ ಮೂಡಿಸಿದ ಬಗೆಯನ್ನು ತಮ್ಮ ಅನುಭವದ ಭತ್ತಳಿಕೆಯಿಂದ ಹೊರತೆಗೆದು ಸಭೆಗೆ ನೀಡಿದರು. ಇದಲ್ಲದೆ ತಾವು ಇಷ್ಟರಲ್ಲಿಯೇ ಹಮ್ಮಿಕೊಳ್ಳಬೇಕೆಂದಿರುವ "ತಿಹಾರ್ ಜೈಲು ವಾಸಿಗಳಿಗಾಗಿ ಕಲಾ ಕಾರ್ಯಾಗಾರ"ದ ಬಗೆಗೂ ಸಭೆಗೆ ತಿಳಿಸಿದರು.

ಸಭಾಮಂಟಪದ ಮೇಲೆ ಆಸೀನರಾಗಿದ್ದ ದೆಹಲಿ ಕರ್ನಾಟಕ ಸಂಘ ಮತ್ತು ಕರ್ನಾಟಕ ಲಲಿತ ಕಲಾ ಅಕಾಡೆಮಿ ಜಂಟಿಯಾಗಿ ಆಯೋಜಿಸಿದ್ದ "ದೆಹಲಿಯಲ್ಲಿ ಕರ್ನಾಟಕದ ಬಯಲು ಚಿತ್ರಾಲಯ"ದ ಸಂಚಾಲಕ ಶ್ರೀ ಚೆನ್ನು ಎಸ್. ಮಠದ ಇಂಥ ಇನ್ನೊಂದು ಕಾರ್ಯಾಗಾರವನ್ನು ದೆಹಲಿಯಯಲ್ಲಿಯೇ ನೆಲೆಸಿದ ಕನ್ನಡದ ಕಲಾವಿದರಿಗಾಗಿ ಏರ್ಪಡಿಸಬೇಕು ಎಂದು ಹೇಳಿದರೆ, ಇನ್ನೋರ್ವ ಸಂಚಾಲಕ ಶ್ರೀ ಸುಧೀರ್ ಫಡ್ನಿಸ್ ಮಾತನಾಡಿ ಇಂತಹ ಕಲಾ ಕಾರ್ಯಗಾರಗಳ ಆಯೋಜನೆ ಕಲಾಕಾರರಿಗೆ ಪರಸ್ಪರ ವಿಚಾರ ಹಾಗೂ ತಂತ್ರಗಾರಿಕೆಗಳ ವಿನಿಮಯ ಮತ್ತು ಕೃತಿ ರಚನೆಗೆ ಹೊಸ ಆಯಾಮ ನೀಡುವುದಕ್ಕೆ ಸಹಕಾರಿ ಎಂದರು.

ದೆಹಲಿ ಕರ್ನಾಟಕದ ಸಂಘದ ಜಂಟಿ




# ಡಾ. ಬಿಳಿಮಲೆ





ಕಾರ್ಯದರ್ಶಿ ಶ್ರೀಮತಿ ಜಮುನಾ ಸಿ. ಮಠದ ಕರ್ನಾಟಕ ಲಲಿತ ಕಲಾ ಅಕಾಡೆಮಿ ಪರವಾಗಿ ಸಭಾಮಂಟಪದಲ್ಲಿ ಆಸೀನರಾಗಿದ್ದ ಡಾ ಅಶೋಕ್ ಎಸ್ ಶೆಟ್ಟರ್ ಅವರಿಗೆ ಭಾಗವಹಿಸಿದ ಎಲ್ಲ ಕಲಾವಿದರಿಗೆ ವಿತರಿಸಲು ಪ್ರಮಾಣ ಪತ್ರ ಹಾಗೂ ಸಂಭಾವನೆ ನೀಡಿದರು.

ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ  ಹಾಗು ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ ಅವರು ವಾಡಿಕೆಯಂತೆ ಸಭಾ ಮಂಟಪದ ಮೇಲೆ ಆಸೀನರಾಗದೆ ಇದ್ದು ನಿರ್ವಹಣೆ, ಸ್ವಾಗತ ಹಾಗೂ ವಂದಾರ್ಪಣೆ ಮಾಡಿದ್ದು ಈ ಸಭೆಗೆ ಒಂದು ವಿಭಿನ್ನ ರೀತಿಯ ಕಳೆ ನೀಡಿತ್ತು.

ಸಭಾ ಕಾರ್ಯಕ್ರಮದ ನಂತರ ವಿದೂಷಿ ರಜನಿರಾವ್ ಮತ್ತು ಶಿಷ್ಯೆಯರಿಂದ ಕನ್ನಡದ ಹಾಡುಗಳಿಗೆ ಕಥಕ್ ನೃತ್ಯ ಪ್ರದರ್ಶನ ಸಭಿಕರ ಮನಸೆಳೆಯಿತು. ಅ

**ಜಮುನಾ ಸಿ ಮಠದ**






# ದೆಹಲಿಯಲ್ಲಿ ಡಾ. ವಿಷ್ಣುವರ್ಧನ್ ರಾಷ್ಟ್ರೀಯ ಉತ್ಸವ

ಬೆಂಗಳೂರಿನ ಡಾ. ವಿಷ್ಣು ಸೇನಾ ಸಮಿತಿಯು ದೆಹಲಿ ಕರ್ನಾಟಕ ಸಂಘದ ಸಹಕಾರದೊಂದಿಗೆ ಕಳೆದ 30 ವರುಷಗಳ ಹಿಂದೆಯೇ ದೇಶದ ಪಂಚಭಾಷೆಗಳಲ್ಲಿ ಅಭಿನಯಿಸಿ ಕನ್ನಡದ ಕೀರ್ತಿಯನ್ನು ಭಾರತದುದ್ದಕ್ಕೂ ಸಾರಿದ ಶ್ರೇಷ್ಠನಟರಾದ ಡಾ. ವಿಷ್ಣುವರ್ಧನ್ ಅವರ ನೆನಪಿನಲ್ಲಿ ರಾಷ್ಟ್ರೀಯ ಉತ್ಸವವನ್ನು ನವದೆಹಲಿಯಲ್ಲಿ ಆಗಸ್ಟ್ 27ರಂದು ಆಚರಿಸಿತು. ಡಾ. ವಿಷ್ಣು ಸೇನಾ ಸಮಿತಿ ರಾಜ್ಯಾಧ್ಯಕ್ಷರಾದ ವೀರಕಪುತ್ರ ಶ್ರೀನಿವಾಸ ಅವರು ಕಾರ್ಯಕ್ರಮದ ನೇತೃತ್ವ ವಹಿಸಿದ್ದರು.

ನವದೆಹಲಿಯ ಇಂಡಿಯಾ ಗೇಟ್ ಮುಂಭಾಗದಲ್ಲಿ ಬೆಳಿಗ್ಗೆ ಏಳು ಗಂಟೆಗೆ ಡಾ. ವಿಷ್ಣು ಅವರ ಭಾವಚಿತ್ರ ಮತ್ತು ಕನ್ನಡ ಧ್ವಜವನ್ನು ಹಿಡಿದು ಮೆರವಣಿಗೆ ಮಾಡಲಾಯಿತು. ನಂತರ ಆಸ್ಟ್ರೇಲಿಯಾದಿಂದ ಬಂದ ಶ್ರೀ ಬಲರಾಮ್ ಅವರು ಡಾ. ವಿಷ್ಣು ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿದರು. ಡಾ. ವಿಷ್ಣುವರ್ಧನ್ ಅವರು ಸೂರಪ್ಪ ಚಿತ್ರದಲ್ಲಿ ಮಾಡಿದ ಪಾತ್ರದ ಆರಡಿ ಪುತ್ಥಳಿಯ ಅನಾವರಣವು ಕನ್ನಡ ಸಾಹಿತ್ಯ ಪರಿಷತ್ತಿನ ರಾಜ್ಯಾಧ್ಯಕ್ಷರಾದ ಶ್ರೀ ಮನು ಬಳಿಗಾರ್ ಅವರಿಂದ ನೆರವೇರಿತು. ಸೂರಪ್ಪ ಚಿತ್ರದ ದೃಶ್ಯವೊಂದರಲ್ಲಿ ನಟ ಚರಣ್‌ರಾಜ್ ಅವರು ವಿಷ್ಣು ಅವರ ಪುತ್ಥಳಿಯನ್ನು ಒಡೆದು ಹಾಕಿರುತಾರೆ. ಚರಣ್ ರಾಜ್ ಅವರು ಮುಖ್ಯ ಅತಿಥಿಯಾಗಿ ಪ್ರತಿಮೆಗೆ ಮಾಲಾರ್ಪಣೆ ಮಾಡಿದರು.

ಖ್ಯಾತ ಪತ್ರಕರ್ತರಾದ ಕೆ.ಎಂ. ವೀರೇಶ್ ಅವರಿಂದ ಆಯೋಜನೆಗೊಂಡಿದ್ದಂತಹ ಛಾಯಾಚಿತ್ರ ಪ್ರದರ್ಶನವನ್ನು ಕನ್ನಡ ಸಾಮ್ರಾಟ್ ಟಿ.ಎ. ನಾರಾಯಣ ಗೌಡರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಮಾತಾಡಿದ ಅವರು "ಸ್ಮಾರಕದ ವಿಷಯದಲ್ಲಿ ವಿಷ್ಣು ಅವರಿಗೆ ಅನ್ಯಾಯವಾಗಿದೆ, ಈ ಹಿನ್ನಲೆಯಲ್ಲಿ ವಿಷ್ಣು ಸೇನಾ ಸಮಿತಿ ಕೈಗೊಳ್ಳುವ ಯಾವುದೇ ನಿರ್ಧಾರಕ್ಕೆ ಕರವೇ ಒತ್ತಾಸೆಯಾಗಿರುತ್ತದೆ ಎಂದರು.

ರಾಷ್ಟ್ರೀಯ ಉತ್ಸವದ ಅಂಗವಾಗಿ ಸಂಘದ ಸಭಾಂಗಣದಲ್ಲಿ "ಕರ್ನಾಟಕ ಸಾಂಸ್ಕೃತಿಕ ಲೋಕಕ್ಕೆ ಡಾ. ವಿಷ್ಣು ಕೊಡುಗೆಗಳು" ಎಂಬ ವಿಷಯವಾಗಿ ವಿಚಾರಮಂಡನೆ ನಡೆಯಿತು. ಈ ಸಂದರ್ಭದಲ್ಲಿ ಕೆ.ಎಂ. ವೀರೇಶ್, ವಿ. ನಾಗೇಂದ್ರಪ್ರಸಾದ್, ಬಿ. ನಂದಕುಮಾರ್ ಅವರು ಡಾ. ವಿಷ್ಣು ಅವರೊಂದಿಗಿನ ಒಡನಾಟವನ್ನು ಸಭಿಕರಿಗೆ ತಿಳಿಸಿದರು. ಕೆ.ಎಂ. ವೀರೇಶ್ ಅವರು ವಿಷ್ಣು ಬಗ್ಗೆ ಕೆಲವೊಂದು ನಿಜ ಸಂಗತಿಗಳನ್ನು ಮುಂದಿನ ದಿನಗಳಲ್ಲಿ ಬರೆಯುವುದಾಗಿ ತಿಳಿಸಿದರು. ವಿ. ನಾಗೇಂದ್ರಪ್ರಸಾದ್ ಅವರು ಎಂದಿನಂತೆ ಭಾವುಕರಾದರು. ಖ್ಯಾತ ಪತ್ರಕರ್ತರಾದ ಬಿ. ಗಣಪತಿ ಮತ್ತು ಡಾ. ವಿಜಯಮ್ಮ ಅವರ ಮಾತುಗಳು ವೇದಿಕೆಯ ಮೌಲ್ಯವನ್ನು ಹೆಚ್ಚಿಸಿದವು. ಡಾ. ವಿಷ್ಣು ಅವರ ಸ್ಥಾನ ನಿರ್ದೇಶನದ ಬಗ್ಗೆ ಮಾತನಾಡಿದ ಶ್ರೀ ಪುರುಷೋತ್ತಮ ಬಿಳಿಮಲೆ ಅವರ ಮಾತುಗಳು ವೇದಿಕೆಗೆ ವಿಭಿನ್ನ ಆಯಾಮವನ್ನು ಒದಗಿಸಿದವು.

"ನಿರ್ದೇಶಕರು ಕಂಡಂತೆ ಡಾ. ವಿಷ್ಣು" ಎಂಬ ವಿಷಯದ ವಿಚಾರಗೋಷ್ಠಿಯಲ್ಲಿ ಜೋಸೈಮನ್ ಅವರು ಅನೇಕ ಆಸಕ್ತಿದಾಯಕ ವಿಷಯಗಳನ್ನು ಪ್ರಸ್ತಾಪಿಸಿ



ಅಭಿಮಾನಿಗಳ ಮನಸೂರೆಗೊಂಡರು. ಪತ್ರಕರ್ತ ಚಕ್ರವರ್ತಿ ಚಂದ್ರಚೂಡ್ ಅವರು ಸ್ಮಾರಕದ ವಿಷಯವನ್ನು ಪ್ರಸ್ತಾಪಿಸುತ್ತಾ ರಾಷ್ಟ್ರೀಯ ಉತ್ಸವ ಆಯೋಜನೆಯ ಹಿನ್ನಲೆಯನ್ನು ಸೂಚ್ಯವಾಗಿ ಪ್ರತಿಪಾದಿಸಿದರು.

ದೊರೆ ಭಗವಾನ್ ಅವರು ಡಾ. ವಿಷ್ಣು ಅವರು ನಂಬರ್ ಒನ್ ನಟ ಆಗಿದ್ದರು ಎಂಬುದನ್ನು ಕೆಲವು ಆಸಕ್ತಿಕರ ಉದಾಹರಣೆಗಳೊಂದಿಗೆ ವಿವರಿಸಿದರು. ತಾರಾ ಮೇಳದಲ್ಲಿ ದಿನೇಶ್ ಗುಂಡೂರಾವ್, ರಾಜೇಂದ್ರ ಸಿಂಗ್ ಬಾಬು, ಚರಣ್‌ರಾಜ್, ಎಸ್. ಶಿವರಾಮ್, ಹೇಮಾಚೌದರಿ, ಅರುಣ್‌ಸಾಗರ್, ಶ್ರೀನಗರ ಕಿಟ್ಟಿ, ಆದಿತ್ಯ, ಬಿ.ಸಿ. ಪಾಟೀಲ್, ರವಿಶಂಕರ್, ರಾಗಿಣಿ ಮುಂತಾದವರು ವೇದಿಕೆಯನ್ನು ಅಲಂಕರಿಸಿದ್ದರು. ಸುಪ್ರೀಂಕೋರ್ಟ್‌ನ ಜಡ್ಜ್ ಶ್ರೀ ಸೋಮನಗೌಡ ಪಾಟೀಲ್ ಅವರು ಸಭಿಕರಾಗಿ ಇಡೀ ಕಾರ್ಯಕ್ರಮ ವೀಕ್ಷಿಸಿದರು. ಅರುಣ್ ಸಾಗರ್ ಎಂಬ ಪ್ರತಿಭಾ ಸುನಾಮಿ ಸುರಿಸಿದ ಉಲ್ಲಾಸದ ಮಳೆಗೆ ಸಭಿಕರೆಲ್ಲರೂ ಒದ್ದೆಮುದ್ದೆಯಾಗಿ ಹೋಗಿದ್ದರು.

ಇದೇ ವೇದಿಕೆಯಲ್ಲಿ ಎಸ್. ಶಿವರಾಮ್ ಅವರಿಗೆ ಡಾ. ವಿಷ್ಣುವರ್ಧನ ರಾಷ್ಟ್ರೀಯ ಪ್ರಶಸ್ತಿ ಪ್ರದಾನಿಸುವುದರ ಜೊತೆಗೆ ಎನ್.ಎಸ್. ಶ್ರೀಧರಮೂರ್ತಿಯವರ ರಚನೆಯ **"ಸಿಂಹಾವಲೋಕನ"** ಕೃತಿಯನ್ನು ಬಿಡುಗಡೆಗೊಳಿಸಲಾಯಿತು. ಬಿ.ವೈ. ತಿಮ್ಮೇಗೌಡ, ವೀಣಾ, ಜ್ಯೋತಿ, ಬಲರಾಮ್, ಸಿ.ಎಂ. ನಾಗರಾಜ್ ಮತ್ತು ವಸಂತ ಶೆಟ್ಟಿ ಬೆಳ್ಳಾರೆ ಅವರಿಗೆ ರಾಷ್ಟ್ರೀಯ ಸನ್ಮಾನವನ್ನು ಮಾಡುವ ಮೂಲಕ ಸಮಾಜಮುಖಿ ವ್ಯಕ್ತಿಗಳನ್ನು ಗೌರವಿಸುವ ಸತ್ಸಂಪ್ರದಾಯವನ್ನು ಮುಂದುವರಿಸಲಾಯಿತು.

ತಾರಾಮೇಳ ಮುಗಿದ ನಂತರ ಶುರುವಾದ ಡ್ರಮ್ಸ್ ದೇವ ಅವರ ವಿಶೇಷ ಪ್ರದರ್ಶನ ಮತ್ತು ಗುರುರಾಜ್, ರವಿಶಂಕರ್, ಆರ್.ಕೆ. ಸ್ಪರ್ಶ, ಶಶಿಕಲಾ ಸುನೀಲ್, ಚೇತನ್, ಅಜೇಯ್ ವಾರಿಯರ್ ಅವರನ್ನೊಳಗೊಂಡ ಡಾ. ವಿಷ್ಣು ಚಿತ್ರಗಳ ಹಾಡಿನೌತಣದಿಂದ ಕೇಳುಗರ ಮನಸೂರೆಗೊಂಡಿತು. ಸಂಗೀತಸಂಜೆಯ ನಂತರ ಡಾ.ವಿಷ್ಣು ಅಭಿಮಾನಿಗಳನ್ನು ಸನ್ಮಾನಿಸಲಾಯಿತು. ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ವಸಂತ ಶೆಟ್ಟಿ ಬೆಳ್ಳಾರೆ ಅವರ ಮಾರ್ಗದರ್ಶನ ಮತ್ತು ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ್ ಅವರ ಸಹಕಾರದಿಂದ ಈ ಕಾರ್ಯಕ್ರಮ ಅರ್ಥಪೂರ್ಣವಾಗಿ ಮೂಡಿಬರಲು ಸಾಧ್ಯವಾಯಿತು. ಅ

***ವೀರಕಪುತ್ರ ಶ್ರೀನಿವಾಸ***












# ‘ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಜನ್ಮೋತ್ಸವ ಹಾಗೂ ಸ್ವಾತಂತ್ರ್ಯೋತ್ಸವ’

ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಸಂಘ, ನವದೆಹಲಿ ಇದರ ವತಿಯಿಂದ ‘ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಜನ್ಮೋತ್ಸವ ಹಾಗೂ ಸ್ವಾತಂತ್ರ್ಯೋತ್ಸವ’ ಕಾರ್ಯಕ್ರಮವನ್ನು ನವದೆಹಲಿಯ ದೆಹಲಿ ಕನ್ನಡ ಶಾಲೆಯಲ್ಲಿ ಇದೇ ಆಗಸ್ಟ್ 15ರಂದು ನಡೆಸಲಾಯಿತು.

ಕಾರ್ಯಕ್ರಮವನ್ನು ಧರ್ಮಕ್ಷೇತ್ರ ಕೂಡಲಸಂಗಮದ ಪ್ರಥಮ ಜಗದ್ಗುರು ಶ್ರೀ ಬಸವಜಯ ಮೃತ್ಯುಂಜಯ ಮಹಾಸ್ವಾಮಿಗಳು ಉದ್ಘಾಟಿಸಿ ಮಾತನಾಡಿದ ಅವರು “ಭಾರತದ ಸ್ವಾತಂತ್ರ್ಯೋತ್ಸವದ ಸಂದರ್ಭದಲ್ಲಿ ಬ್ರಿಟಿಷರ ವಿರುದ್ಧ ಹೋರಾಡಿ ತಾಯ್ನಾಡಿಗಾಗಿ ಪ್ರಾಣವನ್ನು ಅರ್ಪಿಸಿದ ಸ್ವಾತಂತ್ರ್ಯ ಹೋರಾಟಗಾರರ ಹೆಸರಿನಲ್ಲಿ ಸಂಗೊಳ್ಳಿ ರಾಯಣ್ಣ, ಕಿತ್ತೂರುರಾಣಿ ಚೆನ್ನಮ್ಮ ಅವರ ಹೆಸರು ಮುಂಚೂಣಿಯಲ್ಲಿ ಇರಬೇಕಾಗಿತ್ತು. ಕನ್ನಡಿಗರ ಇಂತಹ ಶೌರ್ಯ, ತ್ಯಾಗ, ಬಲಿದಾನಗಳು ರಾಷ್ಟ್ರೀಯ ಇತಿಹಾಸಕಾರರ ನಿರ್ಲಕ್ಷ್ಯದಿಂದ ಅವಗಣನೆಗೆ ಒಳಗಾಗಿರುವುದು ಹಾಗೂ ರಾಯಣ್ಣನ, ಚೆನ್ನಮ್ಮಳ ಹೆಸರು ಉತ್ತರ ಭಾರತೀಯರಿಗೆ ಅರಿವಾಗದಿರುವುದು ವಿಷಾದನೀಯ ಸಂಗತಿ. 1857ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕಿಂತ ಮೊದಲೇ ಸಂಗೊಳ್ಳಿ ರಾಯಣ್ಣನಿಂದಲೇ ಸ್ವಾತಂತ್ರ್ಯ ಹೋರಾಟದ ಪ್ರಥಮ ಕಿಡಿ ಹೊತ್ತಿಕೊಂಡಿತ್ತೆಂಬುದರಲ್ಲಿ ಸಂಶಯವಿಲ್ಲ. ಈ ದೇಶವನ್ನು ಬಿಟ್ಟು ಹೋಗುವ ಸಂದರ್ಭದಲ್ಲಿ ಸ್ವತಃ ಬ್ರಿಟಿಷರೇ ಹೇಳಿದಂತೆ “ನಾವು ನಿಜವಾಗಿಯೂ ಹೆದರಿದ್ದು ಇಬ್ಬರಿಗೆ ಮಾತ್ರ. ಒಂದು ಸಂಗೊಳ್ಳಿ ರಾಯಣ್ಣನಿಗೆ, ಇನ್ನೊಂದು ಕಿತ್ತೂರು ರಾಣಿ ಚೆನ್ನಮ್ಮನಿಗೆ” ಎಂಬ ಮಾತೇ ರಾಯಣ್ಣನ ಶೌರ್ಯಕ್ಕೆ, ದೇಶಭಕ್ತಿಗೆ ಹಿಡಿದ ಕನ್ನಡಿಯಂತಿದೆ. ಇಂತಹ ಮಹಾನ್ ಪುರುಷನನ್ನು ನವದೆಹಲಿಯ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಸಂಘ ಸ್ಮರಿಸಿಕೊಳ್ಳುತ್ತಿರುವುದು ಅಭಿನಂದನೀಯ” ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಭಾರತ ಸರ್ಕಾರದ ನೀತಿ ಆಯೋಗದ ನಿರ್ದೇಶಕರಾದ ಡಾ. ಎಸ್. ಬಿ. ಮುನಿರಾಜು ಅವರು ಮಾತನಾಡಿ “ದೇಶದಲ್ಲಿ ಬ್ರಿಟಿಷರ ವಿರುದ್ಧ ಸಿಡಿದೆದ್ದು ಹೋರಾಡಿದ ಮೊದಲ ಭಾರತೀಯ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಎಂಬುವುದನ್ನೇ ಮರೆತಿರುವ ಕನ್ನಡಿಗರಿಗೆ ನೆನಪಿಸುವ ಅನಿವಾರ್ಯತೆ ಇಂದಿದೆ. ಅಪ್ರತಿಮ ವೀರನಾದ ಸಂಗೊಳ್ಳಿ ರಾಯಣ್ಣನ ದೇಶಭಕ್ತಿಗೆ ಸರಿಸಾಟಿಯೇ ಇಲ್ಲ ಎಂಬ ಅಭಿಮಾನದೊಂದಿಗೆ ನಾವೆಲ್ಲರೂ ಇಂದು ಸೇರಿ ಇಂತಹ ಆಚರಣೆಗಳಲ್ಲಿ ಭಾಗಿಯಾಗುತ್ತಿರುವುದು ಹೆಮ್ಮೆಯ ಸಂಗತಿ” ಎಂದರು.

ಶ್ರೀ ಎನ್. ಆರ್. ಶ್ರೀನಾಥ್, ಶ್ರೀ ನರಸಿಂಹಮೂರ್ತಿ ಅವರು ಸಂಗೊಳ್ಳಿ ರಾಯಣ್ಣನ ಸಾಮಾಜಿಕ ಕಳಕಳಿಯ ಕುರಿತು ತಮ್ಮ ಅನಿಸಿಕೆಯನ್ನು ವ್ಯಕ್ತಪಡಿಸಿದರು. ಶ್ರೀ ಎ. ಟಿ. ಶ್ರೀನಿವಾಸ್, ಶ್ರೀಮತಿ ಮಂಜುಳಾ ನಾಗರಾಜ್ ಅವರು ಕನ್ನಡ ದೇಶಭಕ್ತಿಗೀತೆ, ಭಾವಗೀತೆಯನ್ನು ಪ್ರಸ್ತುತ ಪಡಿಸಿದರು. ಬಳಿಕ ಮಕ್ಕಳಿಂದ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮದಲ್ಲಿ ದೆಹಲಿ ಕರ್ನಾಟಕ ಸಂಘದ ಉಪಾಧ್ಯಕ್ಷರಾದ ಶ್ರೀಮತಿ ಆಶಾಲತಾ ಎಂ. ಉಪಸ್ಥಿತರಿದ್ದರು. ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಸಂಘ, ನವದೆಹಲಿ ಇದರ ಅಧ್ಯಕ್ಷರಾದ ಮಹದೇವ ಆರ್. ಸ್ವಾಗತಿಸಿದರು. ಪ್ರಧಾನ ಕಾರ್ಯದರ್ಶಿ ಶ್ರೀ ಎಸ್. ಡಿ. ಶ್ರೀನಿವಾಸ್ ವಂದಿಸಿದರು. ಶ್ರೀಮತಿ ರಶ್ಮಿ ಮುನಿರಾಜ್ ಕಾರ್ಯಕ್ರಮ ನಿರೂಪಿಸಿದರು. ಕಾರ್ಯಕ್ರಮದಲ್ಲಿ ಜನಕಪುರಿ ಕನ್ನಡಕೂಟದ ಸದಸ್ಯರು, ಗುರುಗಾಂವ್ ಕನ್ನಡಿಗರು ಹಾಗೂ ದೆಹಲಿಯ ಕನ್ನಡಿಗರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮದ ಯಶಸ್ವಿಗೆ ಸಹಕರಿಸಿದರು. ಅ

**ಅರವಿಂದ ಬಿಜ್ಜೈ**

## ಕೆಂಪುಕೋಟೆಯ ಸ್ವಾತಂತ್ರ್ಯೋತ್ಸವ ಆಚರಣೆಯಲ್ಲಿ

# ಕನ್ನಡಿಗರ ಸಾಂಪ್ರದಾಯಿಕ ಮೆರುಗು

ನವದೆಹಲಿಯ ಕೆಂಪುಕೋಟೆಯಲ್ಲಿ ಸ್ವಾತಂತ್ರ್ಯೋತ್ಸವ ಆಚರಣೆಯಲ್ಲಿ ಕರ್ನಾಟಕದ ಸಾಂಪ್ರದಾಯಿಕ ಉಡುಗೆಗಳೊಂದಿಗೆ ದೆಹಲಿ ಕನ್ನಡ ಶಾಲೆಯ ವಿದ್ಯಾರ್ಥಿಗಳು, ಶಿಕ್ಷಕ ವೃಂದ ಹಾಗೂ ಕನ್ನಡ ಭವನದ ಸಿಬ್ಬಂದಿ ವರ್ಗವು ಸಕ್ರಿಯವಾಗಿ ಭಾಗವಹಿಸಿ ಕರ್ನಾಟಕ ರಾಜ್ಯವನ್ನು ಪ್ರತಿನಿಧಿಸಿ ಕೆಂಪುಕೋಟೆಯ ಧ್ವಜಾರೋಹಣಕ್ಕೆ ಸಾಕ್ಷಿಯಾದರು.

ಆಯಾ ರಾಜ್ಯದ ಸಾಂಪ್ರದಾಯಿಕ ಉಡುಗೆಯ ನಡುವೆ ಕನ್ನಡಿಗರ ಸಾಂಪ್ರದಾಯಿಕ ಪಂಚೆ, ಶಲ್ಯ, ಮಗ್ಗದ ಸೀರೆ, ಲಂಗ–ದಾವಣಿ ನೆರೆದವರ ಆಕರ್ಷಣೆಗೆ ಕಾರಣವಾಯಿತು. ಕರ್ನಾಟಕ ಭವನದ ಅಧಿಕಾರಿಗಳು ಕಾರ್ಯಕ್ರಮದ ಮುತುವರ್ಜಿ ವಹಿಸಿದ್ದರು. ದೆಹಲಿ ಕನ್ನಡ ಶಾಲೆಯ ಶಿಕ್ಷಕರಾದ ಶ್ರೀ ಅರವಿಂದ ಬಿಜ್ಜೈ, ಶ್ರೀಮತಿ ಪ್ರೇಮಲತಾ, ಶ್ರೀ ಪ್ರಶಾಂತ್ ಕುಮಾರ್, ಶ್ರೀ ಗಣೇಶ್ ಹೆಗಡೆ, ಶ್ರೀಮತಿ ಜ್ಯೋತಿ ಎಸ್. ಪೊದ್ದಾರ್ ಸಹಕರಿಸಿದರು. ಅ




**ಅರವಿಂದ ಬಿಜ್ಜೈ**

# ವಿಶ್ವಕ್ಕೆ ಕಲೆ ಸಂಸ್ಕೃತಿ ಪರಿಚಯಿಸಿದವರು ವಿಶ್ವಕರ್ಮರು : ಆಸ್ಕರ್ ಫೆರ್ನಾಂಡಿಸ್



ವಿಶ್ವಕ್ಕೆ ಭಾರತದ ಕಲೆ ಸಂಸ್ಕೃತಿಯನ್ನು ಪರಿಚಯಿಸಿದವರು ವಿಶ್ವಕರ್ಮರು, ಶಿಲ್ಪಕಲೆ ಇಡೀ ಜಗತ್ತಿಗೆ ಮಾದರಿಯಾಗಿದೆ, ವಿಶ್ವಕರ್ಮರಿಗೆ ಕಲೆ ಸಂಸ್ಕೃತಿ ಹುಟ್ಟಿನಿಂದಲೇ ಬಂದಿದೆ. ಯಾವುದೇ ತರಬೇತಿಯ ಅಗತ್ಯವಿಲ್ಲ ಎಂದು ರಾಜ್ಯಸಭಾ ಸದಸ್ಯ ಶ್ರೀ ಆಸ್ಕರ್ ಫೆರ್ನಾಂಡಿಸ್ ಅವರು ಹೇಳಿದರು. ಅವರು ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ಕಲಾ ಸಂಕುಲ ಸಂಸ್ಥೆಯ ವತಿಯಿಂದ ಆಗಸ್ಟ್ 11ರಂದು ನಡೆದ ಅಖಿಲ ಭಾರತ ಎರಡನೇ ವಿಶ್ವಕರ್ಮ ಸಂಸ್ಕೃತಿ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ಕರ್ನಾಟಕದಲ್ಲಿ ವಿಶ್ವಕರ್ಮ ಸಮುದಾಯದವರು ಅಭಿವೃದ್ಧಿಯಾಗಬೇಕು ಎಂಬ ಮಹತ್ವದ ಉದ್ದೇಶದಿಂದಲೇ ಕರ್ನಾಟಕ ಸರ್ಕಾರ ವಿಶ್ವಕರ್ಮ ಅಭಿವೃದ್ಧಿ ನಿಗಮವನ್ನು ಸ್ಥಾಪನೆ ಮಾಡಿದೆ, ಕರಕುಶಲಕರ್ಮಿಗಳು ಆರ್ಥಿಕವಾಗಿ, ಶೈಕ್ಷಣಿಕವಾಗಿ ಮುಂದೆ ಬರಬೇಕು. ಮಾರುತಿ ಬಡಿಗೇರ್ ಅವರು ನವದೆಹಲಿಯಲ್ಲಿ ನಡೆಸುತ್ತಿರುವ ಸಮ್ಮೇಳನ ಅತ್ಯಂತ ಮಹತ್ವದ್ದು ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಸಮ್ಮೇಳನ ಸಮಿತಿಯ ಅಧ್ಯಕ್ಷರಾದ ಕಲಾ ಸಂಕುಲ ಸಂಸ್ಥೆಯ ಅಧ್ಯಕ್ಷ ಮಾರುತಿ ಬಡಿಗೇರ್ ಮಾತನಾಡಿ ದೆಹಲಿಯಲ್ಲಿ "ವಿಶ್ವಕರ್ಮ ಭವನ" ನಿರ್ಮಾಣ, ಕೇಂದ್ರ ಸರ್ಕಾರದಿಂದ ವಿಶ್ವಕರ್ಮ ಜಯಂತಿ ಘೋಷಣೆ, ಮತ್ತು ದೇಶದ ಇತರ ರಾಜ್ಯದಲ್ಲೂ ವಿಶ್ವಕರ್ಮ ಜಯಂತಿ ಘೋಷಣೆಯನ್ನು ಕೇಂದ್ರ ಸರ್ಕಾರ ಮಾಡಬೇಕು ಎನ್ನುವ ಉದ್ದೇಶದಿಂದ ಸಮ್ಮೇಳನವನ್ನು ನಡೆಸಲಾಗುತ್ತಿದೆ ಎಂದರು.

ನಿವೃತ್ತ ಐಎಎಸ್ ಅಧಿಕಾರಿ ಬೆಂಗಳೂರಿನ ಕೆ.ಎಸ್. ಪ್ರಭಾಕರ್ ಸಮ್ಮೇಳನಾಧ್ಯಕ್ಷತೆ ವಹಿಸಿದ್ದರು. ಕರ್ನಾಟಕ ರಾಜ್ಯ ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮದ ಅಧ್ಯಕ್ಷ ಎನ್. ನಂದ ಕುಮಾರ್, ಕರ್ನಾಟಕ ರಾಜ್ಯ ವಿಶ್ವಕರ್ಮ ಸಮಾಜದ ಅಧ್ಯಕ್ಷ ಬಾಬು ಪತ್ತಾರ್, ನವದೆಹಲಿ ಜನಕಪುರಿ ಕನ್ನಡ ಕೂಟದ ಅಧ್ಯಕ್ಷ ಎನ್.ಆರ್. ಶ್ರೀನಾಥ್, ಕಲಬುರ್ಗಿ ವಿಶ್ವಕರ್ಮ ಎಜುಕೇಷನಲ್ ಟ್ರಸ್ಟ್ ಅಧ್ಯಕ್ಷ ವೀರೇಂದ್ರ ಇನಾಂದಾರ್, ದೆಹಲಿ ವಿಶ್ವಕರ್ಮ ಸಮಾಜದ ಮುಖಂಡ ಓರಿಲಾಲ್ ಶರ್ಮಾ, ದಿನೇಶ್ ವತ್ಸ, ಪರಮಾನಂದ ಜಾಂಗೀರ, ವೇದ ಪ್ರಕಾಶ್ ಪಾಂಚಾಳ್, ಪ್ರಕಾಶ್ ಪಾಂಚಾಳ್, ಒಲಂಪಿಕ್ ಕ್ರೀಡಾಪಟು ದೀಪಾ ಕರ್ಮಾಕರ್ ಮುಂತಾದವರು ಉಪಸ್ಥಿತರಿದ್ದರು.

ಸಮ್ಮೇಳನದಲ್ಲಿ ಮಂಗಳೂರಿನ ನೃತ್ಯ ಕಲಾವಿದೆ ಕುಮಾರಿ ರೆಮೋನಾ ಇವೆಟ್ ಪಿರೇರಾ ಅವರಿಂದ ನೃತ್ಯ ವೈಭವ, ಕಲಾವಿದರಾದ ಉಡುಪಿಯ ಸುರೇಶ್ ಆಚಾರ್ಯ ಮತ್ತು ರಾಯಚೂರಿನ ಸೌಭಾಗ್ಯ ಅವರಿಂದ ಗೀತಗಾಯನ ನಡೆಯಿತು. ವಿವಿಧ ಕ್ಷೇತ್ರಗಳ ಗಣ್ಯ ಸಾಧಕರಾದ ದಿನೇಶ್ ಕುಮಾರ್ ವತ್ಸ ವಿಶ್ವಕರ್ಮ ನವದೆಹಲಿ, ಅಜಯ್ ಕುಮಾರ್ ಶೋಬಾನೆ ಭೂಪಾಲ್, ಆರ್ಬೆಟ್ಟು ಜ್ಞಾನದೇವಾ ಕಾಮತ್, ಹೇಮ ರೆಡ್ಡಿ ಎನ್, ಆರ್. ಸೌಭಾಗ್ಯ, ಸೋಮಶೇಖರ್, ಜಿ.ಮಹೇಶ್, ಫಾತೀಮಾ ಹುಸೇನ್, ಕೃಷ್ಣ ಕುಮಾರ್ ಎಸ್. ಯಾದವ್, ವಿಜಯ ಕುಮಾರ್ ಹಂಚಿನಾಳ್, ಮೋನಪ್ಪ ಇನಾಂದಾರ್, ಕಾಳಪ್ಪ ಇನಾಂದಾರ್, ಎಂ.ಜಿ.ಪತ್ತಾರ್ ಇವರಿಗೆ ಪ್ರಶಸ್ತಿ ಪ್ರದಾನ ಮತ್ತು ಮಂಗಳೂರಿನ ನೃತ್ಯ ಕಲಾವಿದೆ ರೆಮೋನಾ ಇವೆಟ್ ಪಿರೇರಾಗೆ "ಭಾರತ ಗೌರವ"ಪ್ರಶಸ್ತಿ ಪ್ರದಾನ ನಡೆಯಿತು. ಅ

***ಸುಕುಮಾರ್ ಮುನಿಯಾಲ್ ಉಡುಪಿ.***

# ಸಂಘದಲ್ಲಿ ಗಣೇಶ ಸಾಂಸ್ಕೃತಿಕ ಉತ್ಸವ




ಪ್ರತಿ ವರ್ಷದಂತೆ ಈ ವರ್ಷವೂ ಕೂಡಾ ದೆಹಲಿ ಕರ್ನಾಟಕ ಸಂಘವು ಗಣೇಶ ಸಾಂಸ್ಕೃತಿಕ ಉತ್ಸವವನ್ನು ಅತ್ಯಂತ ಭಕ್ತಿ, ಶ್ರದ್ಧೆ ಮತ್ತು ಭವನಾತ್ಮಕವಾಗಿ ವಿಜೃಂಭಣೆಯಿಂದ ನಡೆಸಿತು. ಇದೇ ಆಗಸ್ಟ್ 25ರಂದು ಬೆಳಿಗ್ಗೆ 9 ಗಂಟೆಗೆ ಸರಿಯಾಗಿ ಸ್ಥಳೀಯ ರಾಘವೇಂದ್ರ ಸ್ವಾಮಿ ಮಠದ ಆಚಾರ್ಯರ ಮೂಲಕ ವಿಧಿಯುಕ್ತವಾಗಿ ಸ್ಥಾಪನೆ, ಪೂಜೆ ಹಾಗೂ ಮಂಗಳಾರತಿಯ ಮೂಲಕ ಸಂಘದ ಎಲ್ಲ ಪದಾಧಿಕಾರಿಗಳು ಹಲವಾರು ಹಿರಿಯ ಸದಸ್ಯರುಗಳ ಸಮ್ಮುಖದಲ್ಲಿ ನೆರವೇರಿತು. ತದನಂತರ ಪ್ರತಿ ದಿನ ಬೆಳಿಗ್ಗೆ 9.00ಗಂಟೆಗೆ ಮತ್ತು ಸಂಜೆ 6.30ಕ್ಕೆ ಸರಿಯಾಗಿ ಮತ್ತೆ ನೈವೇದ್ಯ, ಪೂಜೆ, ಮಂಗಳಾರತಿ ದೆಹಲಿಯ ಹಲವಾರು ಭಕ್ತ ಜನಗಳ ಸಮ್ಮುಖದಲ್ಲಿ ಮೂರು ದಿನಗಳ ಕಾಲ ನಿರಂತರವಾಗಿ ನಡೆಯಿತು.

ಆಗಸ್ಟ್ 27ರಂದು ಮಹಾಮಂಗಳಾರತಿಯ ನಂತರ ಸರ್ವಾಲಂಕೃತನಾದ ವಿಘ್ನರಾಜ ಮೂರ್ತಿಯನ್ನು ನೆರೆದಿದ್ದ ನೂರಾರು ಭಕ್ತಜನರು ದೈವಘೋಷಣೆಗಳನ್ನು ಕೂಗುತ್ತ ಯಮುನ ನದಿ ತೀರಕ್ಕೆ ಕೊಂಡೊಯ್ದು ಮತ್ತೊಮ್ಮೆ ಅಲ್ಲಿ ಭಕ್ತಿಯಿಂದ ಪೂಜೆ ಸಲ್ಲಿಸಿ ವಿಧಿಯೋಕ್ತವಾಗಿ ವಿಸರ್ಜಿಸಲಾಯಿತು.

ಈ ಬಾರಿಯ ಗಣೇಶ ಉತ್ಸವದ ಮಂಟಪದ ಅಲಂಕಾರವನ್ನು ಹಿರಿಯ ಕಲಾವಿದರಾದ ಶ್ರೀ ಚೆನ್ನು ಎಸ್. ಮಠದ ಅವರು ನಡೆಸಿಕೊಟ್ಟರು. ಕಾರ್ಯಕಾರಿ ಸಮಿತಿಯ ಸದಸ್ಯರಾದ ಶ್ರೀ ರಾಧಾಕೃಷ್ಣ ಅವರು ಗಣೇಶ ಸಾಂಸ್ಕೃತಿಕ ಉತ್ಸವದ ಸಂಚಾಲಕರಾಗಿದ್ದರು. ಅ

***ಅಭಿಮತ ವರದಿ***

## ಗಣೇಶ ಮಿತ್ರ ಮಂಡಳಿಯ 29ನೇ ಗಣೇಶೋತ್ಸವ



ಗಣೇಶ ಮಿತ್ರ ಮಂಡಳಿಯ 29ನೇ ಗಣೇಶೋತ್ಸವವು ಇದೇ ಆಗಸ್ಟ್ 25ರಂದು ವಿಜೃಂಭಣೆಯಿಂದ ನಡೆಯಿತು. ಅ



## ಕನ್ನಡ ವಿದ್ಯಾ ಸಂಸ್ಥೆಯಲ್ಲಿ “ಗಣೇಶ ಚತುರ್ಥಿ”

ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆ, ಲೋಧಿ ಎಸ್ಟೇಟ್ ಇಲ್ಲಿ 'ಗಣೇಶ ಚತುರ್ಥಿ' ಹಬ್ಬವನ್ನು ಭಕ್ತಿ ಪೂರ್ವಕವಾಗಿ ಹಾಗೂ ಸಂಭ್ರಮದಿಂದ ಇದೇ ಆಗಸ್ಟ 25ರಂದು ಆಚರಿಸಲಾಯಿತು.

ಹೂವಿನಿಂದ ಅಲಂಕೃತಗೊಂಡ ವಿದ್ಯೆಯ ಹಾಗೂ ಜ್ಞಾನದ ಅಧಿಪತಿಯಾದ ಗಣಪನಿಗೆ ಸಂಸ್ಥೆಯ ಸಂಸ್ಕೃತ ಶಿಕ್ಷಕರು ಹಾಗೂ ಪಂಡಿತರಾದ ಶ್ರೀ ಗಣೇಶ ಹೆಗಡೆ ಅವರ ಪೌರೋಹಿತ್ಯದಲ್ಲಿ ಸಂಸ್ಥೆಯ ಮಾನ್ಯ ಪ್ರಾಂಶುಪಾಲರಾದ ಶ್ರೀ ಕೆ. ಟಿ. ಗಣೇಶ್ ಅವರು ಪೂಜಾ ವಿಧಿವಿಧಾನಗಳನ್ನು ನೆರವೇರಿಸಿದರು.

ಈ ಸಂದರ್ಭದಲ್ಲಿ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಸರವು ಕೃಷ್ಣ ಭಟ್, ಉಪಾಧ್ಯಕ್ಷರುಗಳಾದ ಶ್ರೀ ಕೆ. ಆರ್. ರಾಮಮೂರ್ತಿ, ಶ್ರೀಮತಿ ತಾರಾ ರಮೇಶ್, ಮ್ಯಾನೇಜರ್ ಶ್ರೀ ಶಿವಾನಂದ ಸಿರ್ಸಿಕರ್, ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ಎಸ್.ಡಿ. ಶ್ರೀನಿವಾಸ್, ಶ್ರೀ ಶ್ರೀಹರಿ ಹಾಗೂ ಸದಸ್ಯರಾದ ಶ್ರೀಮತಿ ಆಶಾ ಕಾರ್ಯಪ್ಪ ಉಪಸ್ಥಿತರಿದ್ದರು. ಶ್ರದ್ಧಾಭಕ್ತಿಯ, ಸಂಭ್ರಮದ ಈ ಆಚರಣೆಯಲ್ಲಿ ಸಂಸ್ಥೆಯ ಆಡಳಿತ ಮಂಡಳಿಯ ಸದಸ್ಯರು, ಎಲ್ಲಾ ಶಿಕ್ಷಕ, ಶಿಕ್ಷಕೇತರ ವೃಂದದವರು ಹಾಗೂ ವಿದ್ಯಾರ್ಥಿಗಳು ಪಾಲ್ಗೊಂಡು ವಿಘ್ನ ವಿನಾಶಕನ ದರ್ಶನ ಪಡೆದರು. ಬಳಿಕ ಸೂರ್ಯಾಸ್ತದ ಸಮಯದಲ್ಲಿ ವಿವಿಧ ಪೂಜಾ ವಿಧಿವಿಧಾನಗಳನ್ನು ಪಡೆದ ಗಣಪನನ್ನು ಶಾಲಾ ವಠಾರದಲ್ಲೇ ವಿಸರ್ಜನೆ ಮಾಡಲಾಯಿತು. ಅ

*ಅರವಿಂದ ಬಿಜೈ*

## ದೆಹಲಿ ಪೋಲೀಸ್ ಕನ್ನಡಿಗರ ಕಲ್ಯಾಣ ಸಮಿತಿಯ 16ನೇ ಗಣೇಶೋತ್ಸವ

ದೆಹಲಿ ಪೋಲೀಸ್ ಕನ್ನಡಿಗರ ಕಲ್ಯಾಣ ಸಮಿತಿಯು ಪ್ರತಿವರ್ಷದಂತೆ ಈ ವರ್ಷವೂ ಆಗಸ್ಟ್ 25ರಂದು ಪೂಜಾ ಭಜನೆಗಳ ಪ್ರಸಾದ ವಿನಿಯೋಗದ ಜೊತೆ ಗಣೇಶಮೂರ್ತಿ ಪ್ರತಿಷ್ಠಾಪನೆ ಮಾಡಲಾಯಿತು. ಆಗಸ್ಟ್ 27ರಂದು ಅಶೋಕ್ ವಿಹಾರ್ ಪೋಲಿಸ್ ಕಾಲೋನಿ ಸಮುದಾಯ ಭವನದಲ್ಲಿ ಶ್ರೀ ವಿನಾಯಕನ ಭಕ್ತಾದಿಗಳು ಹಾಗೂ ಸಮಸ್ತ ದೆಹಲಿ ಪೋಲೀಸ್ ಕನ್ನಡಿಗರ ಸದಸ್ಯರು ಹಾಗೂ ಕುಟುಂಬವರ್ಗದವರು ಭಾಗವಹಿಸಿದ್ದರು. ಪೂಜಾಕಾರ್ಯಕ್ರಮ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳ ನಂತರ ಎಲ್ಲರೂ ಭೋಜನವನ್ನು ಮಾಡಿ ಡೋಲ್‌ಗಳ ಮಂಗಳವಾದ್ಯದೊಂದಿಗೆ ಶ್ರೀ ವಿನಾಯಕ ಮೂರ್ತಿಯನ್ನು ರೋಹಿಣಿಯ ತಂಪಾದ ತಿಳಿನೀರಿನ ನಾಲೆಯಲ್ಲಿ ವಿಸರ್ಜನೆ ಮಾಡಲಾಯಿತು. ಅ

*ಎ.ಟಿ. ಶ್ರೀನಿವಾಸ್*



## ಗೀತಾ ಮಂದಿರದಿಂದ ಗಣೇಶೋತ್ಸವ



ಗೀತಾಮಂದಿರದಲ್ಲಿ ಗಣೇಶ ಹಬ್ಬವನ್ನು ಆಗಸ್ಟ್ 25ರಿಂದ 30ರವರೆಗೆ ಬಹಳ ವಿಜೃಂಭಣೆಯಿಂದ ಆಚರಿಸಲಾಯಿತು. ಶ್ರೀ ಎಲ್.ಕೆ. ಅಡ್ವಾಣಿ, ಶ್ರೀ ಧನಂಜಯ ಕುಮಾರ್ ಹಾಗೂ ಇನ್ನೂ ಅನೇಕ ಗಣ್ಯರು ಭಾಗವಹಿಸಿದ್ದರು ಅ

## ಗುರ್‌ಗಾಂವ್ ಕನ್ನಡ ಸಂಘದಿಂದ ಗಣೇಶೋತ್ಸವ



ಗುರ್‌ಗಾಂವ್ ಕನ್ನಡ ಸಂಘದ ಶ್ರೀ ಗಣೇಶೋತ್ಸವವನ್ನು ಗುರ್‌ಗಾಂವ್‌ನ ಶ್ರೀ ರಾಧಾಕೃಷ್ಣ ಮಂದಿರದಲ್ಲಿ ಇದೇ ಆಗಸ್ಟ್ 25 ರಿಂದ 27ರವರೆಗೆ ಅತ್ಯಂತ ಶ್ರದ್ಧೆ ಮತ್ತು ಭಕ್ತಿಯಿಂದ ಆಚರಿಸಲಾಯಿತು.

ಶ್ರೀ ಗಣೇಶ ಪ್ರತಿಷ್ಠಾಪನೆಯನ್ನು ಮಾಡಿ ಪ್ರತಿದಿನದ ಬೆಳಿಗ್ಗೆ ಹಾಗೂ ಸಂಜೆಯ ಪೂಜೆ ನಡೆಯಿತು. ಎಲ್ಲಾ ಕನ್ನಡಿಗರು ತಮ್ಮ ಪರಿವಾರ ಸಮೇತ ಮೂರು ದಿನಗಳ ಕಾಲ ಶ್ರೀಗಣೇಶನ ಪೂಜೆ ಕಾರ್ಯಗಳಲ್ಲಿ ತೊಡಗಿಸಿಕೊಂಡು ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು. ಪ್ರತಿದಿನ ರಾತ್ರಿ ಪ್ರಸಾದ ಮತ್ತು ಭೋಜನದ ವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ಮಾಡಲಾಗಿತ್ತು. ಸ್ಥಳೀಯ ಕನ್ನಡಿಗರಿಗಾಗಿ ಶನಿವಾರ ಸಂಜೆ ಸಾಂಸ್ಕೃತಿಕ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಮಂಟಪ ಮತ್ತು ವೇದಿಕೆಯನ್ನು ಹೋಂಡಾ ಮತ್ತು ಹೀರೋ ಕಂಪೆನಿಗಳಲ್ಲಿ ಕೆಲಸ ಮಾಡುತ್ತಿರುವ ಕನ್ನಡಿಗರು ಹಾಗೂ ಸ್ನೇಹಿತರು ಸೇರಿ ಸುಂದರವಾಗಿ ಮಾಡಿದ್ದರು. ಗಣೇಶ ವಿಸರ್ಜನೆ ನಂತರ ಎಲ್ಲರೂ ಶ್ರೀ ರಾಧಾಕೃಷ್ಣ ಮಂದಿರದಲ್ಲಿ ಭೋಜನದ ವ್ಯವಸ್ಥೆ ಮಾಡಲಾಯಿತು. ಗುರ್‌ಗಾಂವ್ ಕನ್ನಡ ಸಂಘದ ಅಧ್ಯಕ್ಷರಾದ ಶ್ರೀ ಗಣೇಶ ಉಪಾಧ್ಯಾಯ ಅವರು ಈ ಕಾರ್ಯದಲ್ಲಿ ಶ್ರಮಿಸಿದ ಎಲ್ಲರಿಗೂ ಧನ್ಯವಾದ ತಿಳಿಸಿದರು. ಅ

*ಕೃಷ್ಣಪ್ಪ ಎಂ.*



## ಜನಕಪುರಿ ಕನ್ನಡ ಕೂಟದಿಂದ ಗಣೇಶ ಮಹೋತ್ಸವ

ಜನಕಪುರಿ ಕನ್ನಡ ಕೂಟವು ಗಣೇಶ ಮಹೋತ್ಸವವನ್ನು ಆಗಸ್ಟ್ 27ರಂದು ಜನಕಪುರಿಯ ರಾಮಮಂದಿರದಲ್ಲಿ ವಿಜೃಂಭಣೆಯಾಗಿ ಆಚರಿಸಿತು. ದೆಹಲಿಯ ಕನ್ನಡಿಗರಲ್ಲದೆ, ಅನೇಕ ಸ್ಥಳೀಯ ಜನರು ಸಹ ವಿಘ್ನೇಶ್ವರನ ಆಶೀರ್ವಾದ ಪಡೆದರು. ಕನ್ನಡ ಖ್ಯಾತ ಹಿರಿಯ ಕಲಾವಿದರಾದ ಶ್ರೀ ಶಿವರಾಂ ರವರು ಕೂಟದ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದು ವಿಶೇಷವಾಗಿತ್ತು. ಎಲ್ಲರ ಸಹಯೋಗದೊಂದಿಗೆ ಪೂಜೆಯು ವಿಧಿವತ್ತಾಗಿ ನಡೆಯಿತು. ಅ

*ಎಂ.ವಿ. ವೆಂಕಟೇಶ್*



## ಕರ್ನಾಟಕ ಭವನ

ದೆಹಲಿಯಲ್ಲಿರುವ ಕರ್ನಾಟಕ ಭವನದ ಸಿಬ್ಬಂದಿಗಳು ಒಂಭತ್ತನೇ ವರ್ಷದ ಗಣೇಶ ಹಬ್ಬವನ್ನು ಆರ್.ಕೆ. ಪುರಂನಲ್ಲಿರುವ ತಮ್ಮ ವಸತಿ ಗೃಹ ಸಮುಚ್ಚಯದಲ್ಲಿ ಇದೇ ಆಗಸ್ಟ್ 25ರಿಂದ 27ರ ವರೆಗೆ ಬಹಳ ವಿಜೃಂಭಣೆಯಿಂದ ಆಚರಿಸಿದರು.

ವಸತಿ ಗೃಹದ ಎಲ್ಲಾ ಸದಸ್ಯರುಗಳು ಸಹೋದರ ಭಾವನೆಯಿಂದ ಒಂದುಗೂಡಿ ಎಲ್ಲಾ ಪೂಜಾವಿಧಾನಗಳೊಂದಿಗೆ ಪೂಜೆ ನೆರವೇರಿಸಿದರು. ನಂತರ ಸಾಂಸ್ಕೃತಿಕ ಕಾರ್ಯಕ್ರಮವನ್ನು ಕೂಡಾ ಏರ್ಪಡಿಸಲಾಯಿತು. ಕರ್ನಾಟಕ ಭವನ ನೌಕರರ ವಸತಿ ಗೃಹದ ಗಣೇಶ ಮಿತ್ರ ಮಂಡಳಿಯ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರಾದ ಶ್ರೀ ತ್ಯಾಗೇಶ್ ಮೂರ್ತಿ ಹಾಗೂ ಕಾರ್ಯದರ್ಶಿಯಾದ ಶ್ರೀ ಎಸ್. ಕುಮಾರ್, ಜಂಟಿ ಕಾರ್ಯದರ್ಶಿಯಾದ ಶ್ರೀ ಸುಧೀರ್ ಕುಮಾರ್, ಖಜಾಂಚಿಯಾದ ಶ್ರೀ ಕೆ. ರವಿ ಮತ್ತು ಸಹಕಾರ ಮಂಡಳಿಯ ಶ್ರೀ ಎಲ್. ದಿವಾಕರ್, ಶ್ರೀ ಎಸ್.ಕೆ. ಆನಂದರಾಮ್ ಮೊದಲಾದವರು ವಿವಿಧ ಚಟುವಟಿಕೆಗಳನ್ನು ನಡೆಸಿಕೊಟ್ಟರು. ದೆಹಲಿ ಕರ್ನಾಟಕ ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ ನಾಗರಾಜ್ ಗಣೇಶೋತ್ಸವಕ್ಕೆ ಸಹಕಾರ ನೀಡಿದರು. ಅ

*ಅಭಿಮತ ವರದಿ*



### ಹಿರಿಯ ಪತ್ರಕರ್ತ ಡಿ. ಉಮಾಪತಿ ಅವರಿಗೆ

## ಕನ್ನಡ ಸಾಹಿತ್ಯ ಪರಿಷತ್ತಿನ ನಾಗಡಿಕೆರೆ ಕಿಟ್ಟಪ್ಪಗೌಡ ರುಕ್ಮಿಣಿ ದತ್ತಿ ಪ್ರಶಸ್ತಿ ಪ್ರದಾನ

ಪತ್ರಿಕಾ ರಂಗದಲ್ಲಿ ಸಲ್ಲಿಸಿರುವ ಅನುಪಮ ಸೇವೆಯನ್ನು ಪರಿಗಣಿಸಿ ಕನ್ನಡ ಸಾಹಿತ್ಯ ಪರಿಷತ್ತು 2017ನೇ ಸಾಲಿನ ನಾಗಡಿಕೆರೆ ಕಿಟ್ಟಪ್ಪಗೌಡ ರುಕ್ಮಿಣಿ ದತ್ತಿ ಪ್ರಶಸ್ತಿಯನ್ನು ಇದೇ ಆಗಸ್ಟ್ 27ರಂದು ಹಿರಿಯ ಪತ್ರಕರ್ತ ಶ್ರೀ ಡಿ. ಉಮಾಪತಿ ಅವರಿಗೆ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಡಾ. ಮನು ಬಳಿಗಾರ ಅವರು ನವದೆಹಲಿಯ ಕರ್ನಾಟಕ ಭವನದಲ್ಲಿ ಪ್ರಶಸ್ತಿ ಪ್ರದಾನ ಮಾಡಿದರು. ಈ ಸಂದರ್ಭದಲ್ಲಿ ಜವಾಹರಲಾಲ ನೆಹರೂ ವಿಶ್ವವಿದ್ಯಾಲಯ ಕನ್ನಡ ಅಧ್ಯಯನ ಪೀಠದ ಮುಖ್ಯಸ್ಥರಾದ ಡಾ. ಪುರುಷೋತ್ತಮ ಬಿಳಿಮಲೆ ಹಾಗೂ ಲೇಖಕರಾದ ಡಾ. ಸಂತೋಷ ಹಾನಗಲ್, ಬೆಂಗಳೂರು ಇವರು ಉಪಸ್ಥಿತರಿದ್ದರು. ಅ

***ಅಭಿಮತ ವರದಿ***

## ದೆಹಲಿ ತುಳುಸಿರಿಯ ನೂತನ ಕಾರ್ಯಕಾರಿ ಸಮಿತಿ



ದೆಹಲಿ ತುಳುಸಿರಿಯ 2017–19ನೇ ಸಾಲಿನ ನೂತನ ಕಾರ್ಯಕಾರಿ ಸಮಿತಿಯ ಪದಾಧಿಕಾರಿಗಳನ್ನು ಇದೇ ಆಗಸ್ಟ್ 27ರಂದು ನಡೆದ 'ವಾರ್ಷಿಕ ಸಾಮಾನ್ಯ ಸಭೆ'ಯಲ್ಲಿ ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು. ದೆಹಲಿ ತುಳುಸಿರಿಯ ಅಧ್ಯಕ್ಷರಾದ ಡಾ. ಪುರುಷೋತ್ತಮ ಬಿಳಿಮಲೆ ಅವರು ಸಭೆಯ ಅಧ್ಯಕ್ಷತೆ ವಹಿಸಿದ್ದರು.

ನೂತನ ಅಧ್ಯಕ್ಷರಾಗಿ ಶ್ರೀ ಕೆ. ಆರ್. ರಾಮಮೂರ್ತಿ ಅವರು ಆಯ್ಕೆಯಾಗಿದ್ದಾರೆ. ಇತರ ಪದಾಧಿಕಾರಿಗಳು ಮತ್ತು ಸದಸ್ಯರು: ಡಾ. ಸಾಯಿ ಪ್ರಶಾಂತಿ ಶೆಟ್ಟಿ ಮತ್ತು ಶ್ರೀಹರಿ (ಉಪಾಧ್ಯಕ್ಷರು), ಪ್ರದೀಪ್ ಕುಮಾರ್ (ಕಾರ್ಯದರ್ಶಿ), ಕೆ.ಎಸ್.ಜಿ. ಶೆಟ್ಟಿ (ಕೋಶಾಧಿಕಾರಿ), ಮಾಲಿನಿ ಪ್ರಹ್ಲಾದ್ ಮತ್ತು ಪ್ರಶಾಂತ್ ಕುಮಾರ್ (ಜಂಟಿ ಕಾರ್ಯದರ್ಶಿಗಳು) ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರಾಗಿ ಬಿ. ಪ್ರದೀಪ್ ರಾವ್, ಅರವಿಂದ ಬಿಜೈ, ಚಂದ್ರ ನಾಯ್ಕ್ ಅವರು ಆಯ್ಕೆಯಾಗಿದ್ದಾರೆ.

ಶ್ರೀ ಕೆ. ಆರ್. ರಾಮಮೂರ್ತಿಯವರು ಖಾಸಗಿ ಕಂಪೆನಿಯಲ್ಲಿ ರಿಸ್ಕ್ ಮ್ಯಾನೇಜ್‌ಮೆಂಟ್ ವಿಭಾಗದಲ್ಲಿ ತನಿಖಾ ಅಧಿಕಾರಿಯಾಗಿದ್ದಾರೆ. ಪ್ರಸ್ತುತ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯಲ್ಲಿ ಉಪಾಧ್ಯಕ್ಷರಾಗಿ ಸಕ್ರಿಯ ಸೇವೆ ಸಲ್ಲಿಸುತ್ತಿರುವ ಮೂರ್ತಿಯವರು ಸೌತ್ ಕೆನರಾ ಕ್ಲಬ್‌ನಲ್ಲಿ ಕಾರ್ಯದರ್ಶಿಯಾಗಿ, ದೆಹಲಿ ಮಾಧ್ವ ಸಂಘದ ಉಪಾಧ್ಯಕ್ಷರಾಗಿ, ತುಳುನಾಡು ಅಭಿವೃದ್ಧಿ ವೇದಿಕೆಯಲ್ಲಿ ಹಾಗೂ ದೆಹಲಿ ಕರ್ನಾಟಕ ಸಂಘದಲ್ಲಿ ಖಜಾಂಚಿಯಾಗಿಯೂ ಕೆಲಸ ನಿರ್ವಹಿಸಿದ್ದಾರೆ. ಅ

***ಅರವಿಂದ ಬಿಜೈ***


ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ ಬಹುವರ್ಣದ ಸುಸಜ್ಜಿತ ಮುದ್ರಣಾಲಯ ಸೌಜನ್ಯ ಪ್ರಿಂಟಿಂಗ್ ಮತ್ತು ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್ ಇಲ್ಲಿ ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡಲಾಗುವುದು. ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು ಬೈಂಡಿಂಗ್ ಕೆಲಸಗಳಿಗಾಗಿ ದಯವಿಟ್ಟು ಸಂಪರ್ಕಿಸಿ

**SAUJANYA**
**PRINTING PRESS**

A HOUSE OF QUALITY PRINTING

Office :
C-95, Okhla Industrial Area
Phase-I, New Delhi – 110 020

PHONE:
011-40520770

MOBILE:
9811104398,
9811604398

E-MAIL:
saujanyapp2010@gmail.com /
hpgp2006@gmail.com

Delhi Karnataka Sangha Abhimatha Monthly,
Sept-2017, Vol. No.27, Issue No.11, Price Rs.1/- RNI Regn. No. 53405/91, DL-SW-1/4016/16-18
Printout Date : Sept 8th / 9th, Postal Date :10th / 11th, Total Pages-16
Printed & Published by C.M. Nagaraja, General Secretary on behalf of Delhi Karnataka Sangha (R)
Rao Tularam Marg, Sector-12, R.K.Puram, New Delhi-110022, Tel: 26109615
Printed at Saujanya Printing Press C-95, Okhla Industrial Area, Phase-I, New Delhi-110020, Tel: 40520770, Editor: Balakrishna Naik D.



ಕರ್ನಾಟಕ ಲಲಿತಕಲಾ ಅಕಾಡೆಮಿ ಸಹಯೋಗದಲ್ಲಿ 'ರಾಜಧಾನಿಯಲ್ಲಿ ಕರ್ನಾಟಕದ ಬಯಲು ಚಿತ್ರಾಲಯ'ದಲ್ಲಿ ರಚಿಸಿದ ಕಲಾಕೃತಿಗಳ ಪ್ರದರ್ಶನವು ಸಂಘದ ಆರ್ಟ್ ಗ್ಯಾಲರಿಯಲ್ಲಿ ಆಗಸ್ಟ್ 15 ರಿಂದ 20ರವರೆಗೆ ನಡೆಯಿತು

